ಕರ್ನಾಟಕ ಸರ್ಕಾರ

ಸವಿ ಕನ್ನಡ

ಅಭ್ಯಾಸ ಸಹಿತ ಪಠ್ಯಪುಸ್ತಕ

೧

ಒಂದನೆಯ ತರಗತಿ

೨೦೧೫

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
೧೦೦ ಅಡಿ ವರ್ತುಲರಸ್ತೆ, ಬನಶಂಕರಿ ೩ನೆಯ ಹಂತ,
ಬೆಂಗಳೂರು-೫೬೦೦೮೫

ಮುನ್ನುಡಿ

೨೦೦೫ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೪ ನೆಯ ತರಗತಿಯವರೆಗೆ ಪರಿಸರವಿಜ್ಞಾನ, ಗಣಿತ ಮತ್ತು ೫ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ

ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಗಿದೆ.

ಪ್ರೊ. ಜಿ ಎಸ್ ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

ನಾಗೇಂದ್ರ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

ಓದಿಗೆ ಮುನ್ನ....

ಅಧ್ಯಕ್ಷರ ಮಾತು

ರಾಷ್ಟ್ರೀಯ ಶಿಕ್ಷಣ ನೀತಿ ೨೦೦೫ರ ಮಾರ್ಗದರ್ಶಿ ಸೂತ್ರಗಳು ಪಠ್ಯಪುಸ್ತಕ ಪರಿಷ್ಕಾರದ ಸಂದರ್ಭದಲ್ಲಿ ಗಮನಾರ್ಹವಾದ ಅಂಶವಾಗಿದೆ. ಸಂತಸ ಕಲಿಕೆಯನ್ನು ಗಮನದಲ್ಲಿರಿಸಿ ಪಠ್ಯ ಪುಸ್ತಕವನ್ನು ರಚಿಸಬೇಕೆಂಬುದು ಮುಖ್ಯವಾದ ಅಂಶ. ಒಂದನೆಯ ತರಗತಿಯ ಪಠ್ಯಪುಸ್ತಕವನ್ನು ರಚಿಸುವಾಗ ಮಗು ದೈನಂದಿನ ಬದುಕಿನ ಬೇರೆ ಬೇರೆ ಸನ್ನಿವೇಶಗಳಲ್ಲಿ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಅಗತ್ಯವಾದ ಭಾಷಾ ಕೌಶಲಗಳಾದ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಇವುಗಳನ್ನು ಸಮರ್ಥವಾಗಿ ಕಲಿಯಲು ಸಾಧ್ಯವಾಗಬೇಕೆಂಬ ಗುರಿ ಹೊಂದಲಾಗಿದೆ. ಈ ಅಗತ್ಯಗಳನ್ನು ಪೂರೈಸಲು ಅರ್ಥಮಾಡಿಕೊಂಡು ಆಲಿಸುವುದು, ಸ್ಪಷ್ಟ ಉಚ್ಚಾರಣೆಯೊಂದಿಗೆ ಮಾತನಾಡುವುದು, ಸ್ವಂತ ಆಲೋಚನೆ, ಅನಿಸಿಕೆಗಳನ್ನು ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸುವುದು, ಕನ್ನಡದಲ್ಲಿ ಬಳಕೆಯಲ್ಲಿರುವ ಅಕ್ಷರಗಳನ್ನು ಪರಿಚಯ ಮಾಡಿಕೊಳ್ಳುವುದು ಮತ್ತು ಅವುಗಳನ್ನು ಅರಿತು ಬಳಸುವುದು, ನಿತ್ಯದ ವ್ಯವಹಾರಗಳಲ್ಲಿ ಬಳಸುವ ಪದಗಳನ್ನು ಸ್ವಲ್ಪ ಮಟ್ಟಿಗಾದರೂ ಪರಿಚಯಿಸಿಕೊಳ್ಳುವುದು ಉಚ್ಚಾರ, ಒತ್ತು, ಸ್ವರಭಾರಗಳೊಡನೆ ಸಣ್ಣ ಸಣ್ಣ ವಾಕ್ಯಗಳನ್ನು ಉಚ್ಚರಿಸುವುದು ಮತ್ತು ಬರೆಯುವುದು, ಕನ್ನಡದ ಪದ್ಯಗಳನ್ನು ಭಾವಾಭಿನಯದೊಂದಿಗೆ ಹಾಡುವುದು ಇಂತಹ ನಿರ್ದಿಷ್ಟ ಗುರಿಗಳೊಂದಿಗೆ ಪುಸ್ತಕ ರಚನೆಗೆ ಕೈಹಾಕಲಾಗಿದೆ.

ಪ್ರತಿ ಪಠ್ಯವನ್ನು ರಚಿಸುವಾಗಲೂ ಸಾಮರ್ಥ್ಯವಾರು ಪಠ್ಯವಸ್ತು ರೂಪಿತವಾಗಬೇಕೆನ್ನುವುದನ್ನು ಗಮನದಲ್ಲಿಡಬೇಕಾಗಿದೆ, ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಈ ಕೌಶಲಗಳನ್ನು ಮಕ್ಕಳಲ್ಲಿ ಅಭಿವೃದ್ಧಿಪಡಿಸಲು ಅಗತ್ಯವಾಗುವಂತೆ ಪಾಠಗಳನ್ನು ರೂಪಿಸಲಾಗಿದೆ. ಜನಪ್ರಿಯ ಪ್ರಾಸಗೀತೆಗಳನ್ನು ಆಲಿಸುವುದು ಅರ್ಥಮಾಡಿಕೊಳ್ಳುವುದು, ಪರಿಚಿತ ಸನ್ನಿವೇಶಗಳ, ಸಂಭಾಷಣೆ ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು, ಪಠ್ಯದ ಸರಳ ಮಾಹಿತಿಯನ್ನು ನೆನಪಿಸಿಕೊಳ್ಳುವುದು, ಆಲಿಸಿದ ನಂತರ ಸರಳವಾದ ಪ್ರಶ್ನೆಗಳಿಗೆ ಉತ್ತರಿಸುವುದು ಮುಂತಾದ ಆಲಿಸುವ ಕೌಶಲಗಳಿಗೆ ಸಂಬಂಧಿಸಿದ ಪಾಠಗಳನ್ನು ರೂಪಿಸಲಾಗಿದೆ. ಮಕ್ಕಳನ್ನು ಮಾತನಾಡಿಸುವ ಸಂದರ್ಭಕ್ಕೆ ಅಗತ್ಯವಾದ ಪಾಠಗಳನ್ನು, ಸರಳ ಪ್ರಶ್ನೆಗಳಿಗೆ ಉತ್ತರಿಸಬಹುದಾದ ಅಭ್ಯಾಸಗಳನ್ನು ರಚಿಸಲಾಗಿದೆ. ಈಗಾಗಲೇ ಕನ್ನಡದಲ್ಲಿ ಸಾರ್ವತ್ರಿಕವಾಗಿ ಒಪ್ಪಿತವಾಗಿರುವ ಮತ್ತು ಪರಂಪರೆಯಿಂದ ಬಂದಿರುವ ವರ್ಣಮಾಲೆಯ ಅಕ್ಷರಗಳನ್ನು ಅನುಕ್ರಮವಾಗಿ ಗುರುತಿಸಲು ಅಗತ್ಯವಾದ ಅಭ್ಯಾಸಗಳನ್ನು ನೀಡಲಾಗಿದೆ. ಸ್ವರ, ವ್ಯಂಜನ, ಗುಣಿತಾಕ್ಷರಗಳನ್ನು ಮತ್ತು ಒತ್ತಕ್ಷರಗಳನ್ನು ನಕಲು ಮಾಡಿ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಪರಿಚಿತವಾದ ಪದಗಳನ್ನು ಸರಳ ವಾಕ್ಯಗಳನ್ನು ರಚಿಸಲು ಅಗತ್ಯವಾದ ಅಭ್ಯಾಸಗಳನ್ನು ನೀಡಲಾಗಿದೆ.

ಅಕ್ಷರಗಳನ್ನು ಕಲಿಸುವ ಮೂರು ನಾಲ್ಕು ಪದ್ಧತಿಗಳು ಕನ್ನಡದಲ್ಲಿ ಮೊದಲಿನಿಂದಲೂ ಬಳಕೆಗೆ ಬಂದಿವೆ. ಇದರಲ್ಲಿ ಅಕ್ಷರಮಾಲಾ ಪದ್ಧತಿ, ರಠಈಕ ಪದ್ಧತಿ, ರೂಪಸಾಮ್ಯ ಪದ್ಧತಿ ಹಾಗೂ ಧ್ವನಿಸಾಮ್ಯ ಪದ್ಧತಿಗಳು ಪರಿಚಿತವಾದವು. ಕಳೆದ ಹಳವು ವರ್ಷಗಳಿಂದ ಬಳಕೆಯಲ್ಲಿರುವ ರೂಪಸಾಮ್ಯ ಮತ್ತು ಧ್ವನಿಸಾಮ್ಯ ಪದ್ಧತಿಯನ್ನು ಇಲ್ಲಿ ಮುಂದುವರೆಸಲಾಗಿದೆ. ಅಕ್ಷರ, ಪದ ಮತ್ತು ವಾಕ್ಯಗಳನ್ನು ಕಲಿಸಲು ಮತ್ತು ಕಲಿಯಲು ಈ ಪದ್ಧತಿ ಹೆಚ್ಚು ಅನುಕೂಲ ಎಂಬ ದೃಷ್ಟಿಯಿಂದ ಈ ಪದ್ಧತಿಯನ್ನು ಮುಂದುವರೆಸಲಾಗಿದೆ. ಧ್ವನಿ ಮತ್ತು ರೂಪಸಾಮ್ಯವಿರುವ ಅಕ್ಷರಗಳನ್ನು ಕಲಿಯುವುದರ ಮೂಲಕ ಮಕ್ಕಳು ಅಕ್ಷರದಿಂದ ನೇರವಾಗಿ ಪದಕ್ಕೆ, ಪದದಿಂದ ವಾಕ್ಯಕ್ಕೆ ಮುನ್ನಡೆಯುವ ಸಾಧ್ಯತೆ ಇದೆ. ಮೂಲಾಕ್ಷರ, ಗುಣಿತಾಕ್ಷರ, ಒತ್ತಕ್ಷರಗಳನ್ನು ಒಂದು ಕ್ರಮದಲ್ಲಿ ಯೋಜಿಸಿ ನೀಡಲಾಗಿದೆ. ಕಲಿಕೆಗೆ ಅಗತ್ಯವಾಗುವಂತೆ ಪುನರಾವರ್ತನೆಗೆ ಅಗತ್ಯವಾದ ಅಭ್ಯಾಸಗಳನ್ನು ನೀಡಲಾಗಿದೆ.

ಇಡೀ ಪುಸ್ತಕವನ್ನು ಮಕ್ಕಳನ್ನು ಗಮನದಲ್ಲಿಟ್ಟು ರಚಿಸಿದರೂ ಪುಸ್ತಕದ ಎಲ್ಲೆಡೆ ಅಧ್ಯಾಪಕರಿಗೆ ಸೂಚನೆ ನೀಡಲಾಗಿದೆ. ಒಂದನೆಯ ತರಗತಿಯ ಮಕ್ಕಳು ಶಿಕ್ಷಕರ ಮೂಲಕವೇ ಪಾಠಗಳನ್ನು ಕಲಿಯಬೇಕಾದುದರಿಂದ ಈ ರೀತಿಯ ಸೂಚನೆಗಳನ್ನು ನೀಡಲಾಗಿದೆ. ಪ್ರತೀ ಪಾಠಕ್ಕೂ ಒಂದು 'ಪಾಠಪೂರ್ವ ಚಟುವಟಿಕೆ' ನೀಡಲಾಗಿದೆ. ಈ ಪೂರ್ವ ಪಾಠದಲ್ಲಿ ಸಾಮಾನ್ಯವಾಗಿ ಪಾಠಕ್ಕೆ ಪೂರಕವಾಗುವ ಚಿತ್ರಗಳನ್ನು ನೀಡಿ ಆ ಚಿತ್ರಗಳನ್ನು ಗುರುತಿಸುವುದರ ಮೂಲಕ ಮಕ್ಕಳನ್ನು ಮಾತನಾಡಿಸುತ್ತಾ ಪಾಠ ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಪರಿಚಿತವಾದ ಸನ್ನಿವೇಶವನ್ನು ನಿರ್ಮಾಣ ಮಾಡಿ ಅದರ ಮೂಲಕ ಪಾಠವನ್ನು ಆರಂಭಿಸಲು ಸೂಚನೆ ನೀಡಲಾಗಿದೆ. ಪಾಠ ೧೫ರಿಂದ ಮುಂದಕ್ಕೆ ಈ ಪೂರ್ವಪಾಠವಿಲ್ಲ. ಮೊದಲ ನಾಲ್ಕು ಪಾಠಗಳಲ್ಲಿ ಮಕ್ಕಳನ್ನು ಮಾತನಾಡಿಸಲು ಅಗತ್ಯವಾದ ಅಭ್ಯಾಸಗಳನ್ನು ನೀಡಲಾಗಿದೆ. ಸರಳವಾದ ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರ ಪಡೆಯಲು ಸೂಚಿಸಲಾಗಿದೆ. ಐದನೆಯ ಪಾಠದಿಂದ ಬರವಣಿಗೆಯ ಕಡೆಗೆ ಗಮನ ನೀಡಲಾಗಿದೆ. ಮಕ್ಕಳಿಗೆ ಬರವಣಿಗೆ ಅಭ್ಯಾಸ ಮಾಡಲು ಅವಕಾಶ ಒದಗಿಸಲಾಗಿದೆ ನಂತರ ಕನ್ನಡ ಅಕ್ಷರಗಳ ಬರವಣಿಗೆಗೆ ಪೂರಕವಾದ ರೇಖಾಭ್ಯಾಸ ನೀಡಲಾಗಿದೆ. ಅಲ್ಲಲ್ಲಿ ಮಕ್ಕಳು ಚಿತ್ರಕ್ಕೆ ಬಣ್ಣ ತುಂಬಲು ಚಿತ್ರವನ್ನು ಅನುಕರಿಸಿ ಬರೆಯಲು ಹೇಳಲಾಗಿದೆ. ಇವೆಲ್ಲಾ ಬರವಣಿಗೆಯ ಅಭ್ಯಾಸಕ್ಕೆ ಪೂರಕವಾದ ಚಟುವಟಿಕೆಗಳಾಗಿರುತ್ತವೆ. ಕಲಿಕೆಯಲ್ಲಿ ಏಕತಾನತೆಯನ್ನು ತಡೆಯುವ ಉದ್ದೇಶದಿಂದ ಪಾಠ ಆರು ಮತ್ತು ಏಳನ್ನು ಅಕ್ಷರಾಭ್ಯಾಸಗಳ ನಡುವೆ ಸೇರಿಸಲಾಗಿದೆ. ಈ ಪಾಠಗಳ ಮೂಲಕ ಆಲಿಸುವ, ಮಾತನಾಡುವ ಕೌಶಲಗಳ ಮುಂದುವರಿಕೆಗೆ ಅವಕಾಶ ನೀಡಲಾಗಿದೆ. ಧ್ವನಿಸಾಮ್ಯ ಮತ್ತು ರೂಪಸಾಮ್ಯ ಪದ್ಧತಿಯ ಮೂಲಕ ಹತ್ತು ಭಿನ್ನ ಹಂತಗಳಲ್ಲಿ ಮೂಲಾಕ್ಷರಾಭ್ಯಾಸವನ್ನು ಕಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲ ಪಾಠಗಳ ಅಂತ್ಯದಲ್ಲಿ ಪದಗಳ ಮೂಲಕ ವಾಕ್ಯದ ನೆಲೆಗೆ ತಲುಪಲು ಅಗತ್ಯವಾದ ಅಭ್ಯಾಸಗಳನ್ನು ನೀಡಲಾಗಿದೆ. ಮುಂದೆ ಗುಣಿತಾಕ್ಷರಗಳನ್ನು ಕಾಗುಣಿತದ ಕ್ರಮದಲ್ಲಿ ನೀಡಲಾಗಿದೆ. ಈ ಗುಣಿತಾಕ್ಷರಗಳಿಗೆ ನೀಡಿರುವ ತಲೆಕಟ್ಟು ಮುಂತಾದ ಪಾರಿಭಾಷಿಕ ಶಬ್ದಗಳನ್ನು ಶಿಕ್ಷಕರನ್ನು ಉದ್ದೇಶಿಸಿ ನೀಡಲಾಗಿದೆ.

ಇತರ ಕೌಶಲಗಳೊಡನೆ ಓದುವ ಕೌಶಲವನ್ನು ಪಾಠ ಹನ್ನೊಂದರಿಂದ ಮುಂದೆ ನೀಡಲಾಗಿದೆ. ಒತ್ತಕ್ಷರವನ್ನು ಬಳಸದೆ ಸರಳ ವಾಕ್ಯಗಳನ್ನು ಮಕ್ಕಳು ಓದಲು ಸಾಧ್ಯವಾಗಬೇಕು ಎಂಬುದು ಪಾಠ ೧೧-೧೨ರ ಉದ್ದೇಶವಾಗಿದೆ. ಪಾಠ ೧೩ರಲ್ಲಿ ಸಜಾತೀಯ ಒತ್ತಕ್ಷರಗಳನ್ನು ಎರಡು ಹಂತಗಳಲ್ಲಿ ನೀಡಿ ಮೂರನೆಯ ಹಂತದಲ್ಲಿ ಭಿನ್ನರೂಪದ ಒತ್ತಕ್ಷರಗಳನ್ನು, ನಾಲ್ಕನೆಯ ಹಂತದಲ್ಲಿ ವಿಜಾತೀಯ ಒತ್ತಕ್ಷರಗಳನ್ನು ಹಾಗೂ ಅಭ್ಯಾಸಗಳನ್ನು ನೀಡಲಾಗಿದೆ. ಪಾಠ ಹದಿನಾಲ್ಕರಿಂದ ಹದಿನೇಳರವರೆಗೆ ಕಲಿಕೆಯ ನಾಲ್ಕು ಕೌಶಲಗಳನ್ನು ಒಟ್ಟಾಗಿ ಬಳಸಲು ಅನುಕೂಲವಾಗುವಂತೆ ಪಾಠಗಳನ್ನು ರೂಪಿಸಲಾಗಿದೆ. ಪಠ್ಯಪುಸ್ತಕಕ್ಕೆ ಅನುಬಂಧರೂಪದಲ್ಲಿ ಪದಕೋಶ ನೀಡಲಾಗಿದೆ. ಈ ಪದಕೋಶವನ್ನು ಶಿಕ್ಷಕರು ಮತ್ತು ಪೋಷಕರನ್ನು ಗಮನದಲ್ಲಿಟ್ಟು ರಚಿಸಲಾಗಿದೆ. ಅಂತಿಮರೂಪವನ್ನು ನೀಡುವ ಮುನ್ನ ಪಠ್ಯಪುಸ್ತಕ ಸಂಘವು ವಿವಿಧ ಜಿಲ್ಲೆಗಳ ಡಯಟ್‌ಗಳ ಮೂಲಕ ಶಿಕ್ಷಕರಿಂದ ಹಿಮ್ಮಾಹಿತಿ ಪಡೆದಿತ್ತು ಈ ಹಿಮ್ಮಾಹಿತಿ, ಪುಸ್ತಕವನ್ನು ತಿದ್ದುಪಡಿಗೊಳಿಸಲು ತುಂಬ ಸಹಕಾರಿಯಾಯಿತು. ಹಿಮ್ಮಾಹಿತಿ ಒದಗಿಸಿದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರಿಗೆ ಮತ್ತು ಶಿಕ್ಷಕರಿಗೆ ಸಮಿತಿ ಆಭಾರಿಯಾಗಿದೆ. ಪುಸ್ತಕವನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿದ ಸಂಪಾದಕೀಯ ಮಂಡಳಿ ಸದಸ್ಯರಿಗೆ ನಮನಗಳು.

ಪಠ್ಯಪುಸ್ತಕ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಪರಿಶೀಲಕರು ಈ ಪುಸ್ತಕದ ಮೊದಲ ಹಂತದಿಂದ ಇಲ್ಲಿಯವರೆಗೆ ಸಾಕಷ್ಟು ಆಲೋಚಿಸಿ ಪಾಠಗಳನ್ನು ರೂಪಿಸಿ ಅಗತ್ಯವಾದ ಅಭ್ಯಾಸಗಳನ್ನು ರಚಿಸಿಕೊಟ್ಟಿದ್ದಾರೆ. ಕಲಾವಿದರು ಸುಂದರವಾದ ಚಿತ್ರಗಳನ್ನು ರಚಿಸಿ ಈ ಪುಸ್ತಕಕ್ಕೆ ಒಂದು ಹೊಸ ಕಳೆ ನೀಡಿದ್ದಾರೆ. ೨೫೦ಕ್ಕೂ ಹೆಚ್ಚು ಚಿತ್ರಗಳನ್ನು ಈ ಪುಸ್ತಕದಲ್ಲಿ ಅಳವಡಿಸಲಾಗಿರುವುದನ್ನು ಗಮನಿಸಬಹುದು. ನಮ್ಮೊಡನೆ ಸಮಸಮನಾಗಿ ನಿಂತು ಈ ಪುಸ್ತಕ ರೂಪಿಸುವಲ್ಲಿ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು, ಸಂಯೋಜಕರು, ಉಪನಿರ್ದೇಶಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರು ಮಾರ್ಗದರ್ಶನ ಮಾಡುವುದೇ ಅಲ್ಲದೆ ಸಮಸ್ಯೆಗಳ ಸಂದರ್ಭದಲ್ಲಿ ಚರ್ಚಿಸಿ ಸೂಕ್ತ ಸಲಹೆಗಳನ್ನಿತ್ತಿದ್ದಾರೆ. ಇವರು ನೀಡಿದ ಸಲಹೆ ಸೂಚನೆಗಳು ತುಂಬಾ ಸಹಕಾರಿಯಾಗಿವೆ. ಇವರೆಲ್ಲರಿಗೆ ನಾನು ವೈಯಕ್ತಿಕವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಡಾ ಸತ್ಯನಾರಾಯಣ ಮಲ್ಲಿಪಟ್ಟಣ
ಅಧ್ಯಕ್ಷ
ಪಠ್ಯಪುಸ್ತಕ ರಚನಾಸಮಿತಿ
ಸವಿ ಕನ್ನಡ - ೧

ಸವಿ ಕನ್ನಡ – ೧ ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು

ಡಾ ಸತ್ಯನಾರಾಯಣ ಮಲ್ಲಿಪಟ್ಟಣ, ಸಂಯೋಜಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು–೧

ಸದಸ್ಯರು

ಶ್ರೀ ಸಿ. ಎಸ್. ಬನಶಂಕರಯ್ಯ, ನಿವೃತ್ತ ಶಿಕ್ಷಕರು, ಅಶೋಕನಗರ, ಬೆಂಗಳೂರು–೫೦

ಶ್ರೀ ವೆಂಕಟೇಶ್ ಎಚ್. ಲಕ್ಕಾಣಿ, ಸ.ಶಿ., ಎ.ವಿ.ಸ್ಮಾರಕ ಸಂಯುಕ್ತ ಪ.ಪೂ. ಕಾಲೇಜು, ಧಾರವಾಡ.

ಡಾ॥ ರಘುಶಂಖ ಭಾತಂಬ್ರ, ಸ.ಶಿ., ಸರ್ಕಾರಿ ಪ್ರೌಢಶಾಲೆ, ನೌಬಾದ್ ಬೀದರ್–೧

ಶ್ರೀಮತಿ ಕೆ. ವಿಜಯಲಕ್ಷ್ಮಿದೇವಿ, ನಿವೃತ್ತ ಶಿಕ್ಷಕಿ, ನಂ.೩೫೯, ರಾಜಾಜಿನಗರ, ಬೆಂಗಳೂರು–೧೦

ಶ್ರೀ ನೀಲಾವರ ಸುರೇಂದ್ರ ಅಡಿಗ, ಸ.ಶಿ. ಕುವೆಂಪು ಶತಮಾನೋತ್ಸವ ಮಾ.ಪ್ರಾ. ಶಾಲೆ, ಕುಂದಾಪುರ ತಾ॥

ಕಲಾವಿದರು : ಶ್ರೀ ಜಿ ಎಂ ಜಂಗಿ (ರ. ಬನಹಟ್ಟಿ), ಕಲಾವಿದರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು–೮೫

ಪರಿಶೀಲಕರು :

ಶ್ರೀ ಕೆ ಎಂ ಲಿಂಗೇಗೌಡ, ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಮೈಲಾರ ಪಟ್ಟಣ, ನಾಗಮಂಗಲ ತಾ॥

ಸಂಪಾದಕೀಯ ಮಂಡಳಿ ಸದಸ್ಯರು

ಪ್ರೊ॥ ಸಾ.ಶಿ. ಮರುಳಯ್ಯ, ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

ಪ್ರೊ॥ ಅ.ರಾ.ಮಿತ್ರ, ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

ಡಾ॥ ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

ಮುಖ್ಯ ಸಂಯೋಜಕರು :

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ :

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ಪಾಂಡುರಂಗ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು :


ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿವಿಡಿ


ಕೇಳಿಸಿ–ಹೇಳಿಸಿ

(ಪಾಠ – ೧ : ಪಾಠಪೂರ್ವ ಚಟುವಟಿಕೆ)


ಅ) ಚಿತ್ರ ತೋರಿಸಿ ಪದ ಹೇಳಿಸಿ.




ಮರ




ಹುಡುಗ



ಹುಡುಗಿ




ಶಾಲೆ



ಆಟ



ಅಳಿಲು



ಗಂಟೆ



ಕೋತಿ

ಪದ್ಯ ಪಾಠ

ಪಾಠ ೧


ರೆಂಬೆ ಹಿಡಿ

ಕವಿ : ಎಚ್. ಎಸ್. ವೆಂಕಟೇಶ ಮೂರ್ತಿ


(ಈ ಪದ್ಯವನ್ನು ರಾಗವಾಗಿ ಓದಿ, ಮಕ್ಕಳಿಂದ ಹೇಳಿಸಿ)




ರೆಂಬೆ ಹಿಡಿ; ಕೊಂಬೆ ಹಿಡಿ
ಹತ್ತು ಹತ್ತು ಮರ
ಒಳ್ಳೆ ಅಳಿಲ ಥರ !



ತುಳೀ ನೂಕು; ಜೀಕಿ ಜೀಕು
ರೆಂಬೆ ಮೇಲೆ ಕೂಡು
ಥೇಟ್ ಕೋತಿ ನೋಡು !



ಏರು ಅಲ್ಲಿ ; ತೂರು ಇಲ್ಲಿ
ಇನ್ನು ಮೇಲೆ ಹಾರು
ಹಕ್ಕಿ ಹಾಗೆ ತೋರು !



ಶಾಲೆ ಗಂಟೆ; ನಿಲ್ಲೋದುಂಟೆ ?
ಓಡು ಶಾಲೆ ಕೂಗೆ
ಒಳ್ಳೇ ಮಕ್ಕಳ ಹಾಗೆ !

ಕೇಳಿದ ಪದಗಳು :

ರೆಂಬೆ, ಹಿಡಿ, ಕೊಂಬೆ, ಹತ್ತು, ಮರ, ಒಳ್ಳೆ, ಅಳಿಲ, ಥರ, ತುಳೀ, ನೂಕು, ಜೀಕು, ಮೇಲೆ, ಕೂಡು, ಥೇಟ್, ಕೋತಿ, ನೋಡು, ಏರು, ಅಲ್ಲಿ, ತೂರು, ಇಲ್ಲಿ, ಇನ್ನು, ಹಾರು, ಹಕ್ಕಿ, ಹಾಗೆ, ತೋರು, ಶಾಲೆ, ಗಂಟೆ, ನಿಲ್ಲು, ಓಡು, ಕೂಗೆ.

ಅರ್ಥ ತಿಳಿಯಿರಿ :

ರೆಂಬೆ–ಮರದ ಶಾಖೆ; ಅಳಿಲು–ಇಣಚಿ; ಕೊಂಬೆ–ಟೊಂಗೆ; ಜೀಕು–ತೂಗು, ಉಯ್ಯಾಲಾಡು; ಥೇಟ್–ಅದರಂತೆ.

ಅಭ್ಯಾಸ

ಅ) ಪದ್ಯದ ಸಾಲುಗಳಲ್ಲಿ ಬರುವ ಒಂದೊಂದು ಪದವನ್ನು ಬಿಡಲಾಗಿದೆ. ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.

೧) ರೆಂಬೆ ಹಿಡಿ ; ________ ಹಿಡಿ.

೨) ರೆಂಬೆ ಮೇಲೆ ____________

೩) ಥೇಟ್ ____________ ನೋಡು!

೪) ಇನ್ನು ಮೇಲೆ ಹಾರು
____________ ಹಾಗೆ ತೋರು!

ಆ) ಪದ್ಯದ ಸಾಲುಗಳನ್ನು ಕೆಳಗೆ ನೀಡಿದೆ, ಮುಂದಿನ ಪದ/ ಸಾಲುಗಳನ್ನು ಖಾಲಿ ಬಿಡಲಾಗಿದೆ. ಬಿಟ್ಟಿರುವ ಪದ/ಸಾಲುಗಳನ್ನು ಮಕ್ಕಳಿಂದ ಹೇಳಿಸಿ.

೧) ಹತ್ತು ಹತ್ತು ಮರ
___ _____ _____ !

೨) ಏರು ಅಲ್ಲಿ ; ತೂರು ಇಲ್ಲಿ
ಇನ್ನು ಮೇಲೆ _____
___ _____ _____ !

3) ಶಾಲೆ ಗಂಟೆ; ____________ ?
ಓಡು ಶಾಲೆ ಕೂಗೆ
_____ ________ ______ !

ಇ) ಮುಂದೆ ನೀಡಿರುವ ಪ್ರಾಸಪದಗಳನ್ನು ಮಕ್ಕಳಿಂದ ಹೇಳಿಸಿ.

೧) ಮರ–ಥರ

೨) ನೂಕು– ಜೀಕು

೩) ಕೂಡು–ನೋಡು


೪) ಹಾರು–ತೋರು

೫) ಕೂಗೆ–ಹಾಗೆ


ಈ) ಚಿತ್ರಗಳನ್ನು ತೋರಿಸಿ ಪಕ್ಕದಲ್ಲಿರುವ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಿರಿ.



ಅಳಿಲು ಏನು ಮಾಡುತ್ತಿದೆ ?



ಹುಡುಗ ಏನು ಮಾಡುತ್ತಿದ್ದಾನೆ ?




ಮರದ ಮೇಲೆ ಕುಳಿತಿರುವುದು ಏನು?



ಇವರು ಏನು ಮಾಡುತ್ತಿದ್ದಾರೆ ?

(ಪಾಠ – ೨ : ಪಾಠಪೂರ್ವ ಚಟುವಟಿಕೆ)


ಅ) ಚಿತ್ರ ತೋರಿಸಿ ಪದ ಹೇಳಿಸಿ.



ಕೋಳಿ



ಪಾರಿವಾಳ



ಗುಬ್ಬಚ್ಚಿ



ತೋಟ



ರಾಗಿತೆನೆ




ಗುಟುಕು

ಗದ್ಯ ಪಾಠ

ಪಾಠ ೨

ಸಹಕಾರ

(ಪಾಠವನ್ನು ಓದಿ ಹೇಳಿ)



ಒಂದು ಊರು. ಆ ಊರಿನ ಹೆಸರು ಮಲ್ಲಿಗೆಹಳ್ಳಿ. ಆ ಹಳ್ಳಿಯಲ್ಲಿ ಒಂದು ತೋಟವಿತ್ತು. ಆ ತೋಟದಲ್ಲಿ ಒಂದು ಕೋಳಿ ತನ್ನ ಮರಿಗಳ ಜೊತೆಯಲ್ಲಿ ವಾಸವಾಗಿತ್ತು. ಅದೇ ತೋಟದಲ್ಲಿ ಗುಬ್ಬಚ್ಚಿ ಮತ್ತು ಪಾರಿವಾಳಗಳೂ ವಾಸವಾಗಿದ್ದವು.

ಒಂದು ದಿನ ಕೋಳಿಗೆ ರಾಗಿಯ ಕಾಳುಗಳು ಸಿಕ್ಕವು. ರಾಗಿಯನ್ನು ಹೊಲದಲ್ಲಿ ಬಿತ್ತಿದರೆ ತುಂಬಾ ರಾಗಿ ಸಿಗುತ್ತದೆ ಎಂದು ಕೋಳಿಗೆ ಅನಿಸಿತು.

ಕೋಳಿ ರಾಗಿಯನ್ನು ಬಿತ್ತಲು ಗುಬ್ಬಚ್ಚಿಯ ಸಹಾಯ ಕೇಳಿತು. ಗುಬ್ಬಚ್ಚಿ "ನನ್ನಿಂದ ಆಗದು" ಎಂದಿತು. ಕೋಳಿ ಪಾರಿವಾಳದ ಸಹಾಯವನ್ನು ಕೇಳಿತು. ಅದೂ "ನನ್ನಿಂದ ಆಗದು" ಎಂದಿತು. ಕೋಳಿ ತನ್ನ ಮರಿಗಳನ್ನು ಕೂಡಿಕೊಂಡು ರಾಗಿಯನ್ನು ಬಿತ್ತಿತು.

ಕೆಲವು ದಿನಗಳು ಕಳೆದವು. ರಾಗಿಯ ಪೈರುಗಳು ಬೆಳೆದು ದೊಡ್ಡದಾದುವು. ರಾಗಿಯ ಪೈರಿನಲ್ಲಿ ತೆನೆಗಳು ಬಿಟ್ಟವು. ಆ ತೆನೆಗಳನ್ನು ಕೊಯ್ಯುವ ದಿನ ಬಂದಿತು.

ಕೋಳಿ ರಾಗಿಯತೆನೆಗಳನ್ನು ಕೊಯ್ಯಲು ಗುಬ್ಬಚ್ಚಿಯ ಸಹಾಯ ಕೇಳಿತು. ಗುಬ್ಬಚ್ಚಿ "ನನ್ನಿಂದ ಆಗದು" ಎಂದಿತು. ಕೋಳಿ ಪಾರಿವಾಳದ ಸಹಾಯವನ್ನು ಕೇಳಿತು. ಅದೂ "ನನ್ನಿಂದ ಆಗದು" ಎಂದಿತು. ಕೋಳಿ ತನ್ನ ಮರಿಗಳನ್ನು ಕೂಡಿಕೊಂಡು ರಾಗಿಯ ತೆನೆಗಳನ್ನು ಕೊಯ್ದಿತು. ಕಾಳನ್ನು ಸಂಗ್ರಹಿಸಿ ಇಟ್ಟಿತು.

ಒಂದು ದಿನ ಗುಬ್ಬಚ್ಚಿ ಮತ್ತು ಪಾರಿವಾಳಗಳಿಗೆ ತುಂಬಾ ಹಸಿವಾಯಿತು. ಅವು ಕೋಳಿಯ ಬಳಿಬಂದು "ಅಕ್ಕಾ, ತಿನ್ನಲು ರಾಗಿ ಕೊಡು" ಎಂದು ಕೇಳಿದವು. ಕೋಳಿ "ನೀವು ಬಿತ್ತಲು ಬರಲಿಲ್ಲ, ಕೊಯ್ಯಲೂ ಬರಲಿಲ್ಲ. ನಿಮಗೆ ಏಕೆ ರಾಗಿ ಕೊಡಲಿ?" ಎಂದು ಕೇಳಿತು. ಗುಬ್ಬಚ್ಚಿ ಮತ್ತು ಪಾರಿವಾಳಗಳಿಗೆ ತಮ್ಮ ತಪ್ಪು ತಿಳಿಯಿತು. ಅವು ನಾಚಿ ತಲೆತಗ್ಗಿಸಿ ನಿಂತವು. ಕೋಳಿಗೆ 'ಅಯ್ಯೋ ಪಾಪ!' ಅನಿಸಿತು. ರಾಗಿಯನ್ನು ಕೊಟ್ಟಿತು.

ಕೇಳಿದ ಪದಗಳು :

ಒಂದು, ಊರು, ಹೆಸರು, ಮಲ್ಲಿಗೆಹಳ್ಳಿ, ಕೋಳಿ, ಮರಿ, ಜೊತೆ, ವಾಸ, ಗುಬ್ಬಚ್ಚಿ, ಪಾರಿವಾಳ, ದಿನ, ರಾಗಿಕಾಳು, ನೆಲ, ಬಿತ್ತು, ತುಂಬಾ, ಸಹಾಯ, ಕೂಡಿ, ಕೆಲವು, ದೊಡ್ಡದು, ಕೇಳು, ಬೆಳೆ, ತೆನೆ, ಕೊಯ್ಯು, ಪೈರು, ಸಂಗ್ರಹಿಸು, ಬಳಿ, ಹಸಿವು, ನಾಚು, ತಲೆತಗ್ಗಿಸು, ತಪ್ಪು.

ಅರ್ಥ ತಿಳಿಯಿರಿ :

ಗುಬ್ಬಚ್ಚಿ–ಗುಬ್ಬಿ, ಒಂದು ಜಾತಿಯ ಸಣ್ಣ ಪಕ್ಷಿ ; ಸಂಗ್ರಹಿಸು–ಒಟ್ಟುಗೂಡಿಸು;
ಬಿತ್ತು – ಬೀಜ ಹಾಕು, ಪೈರು – ತೆನೆ ಇರುವ ಸಸ್ಯ.

ಅಭ್ಯಾಸ

ಅ) ಪ್ರಶ್ನೆ ಕೇಳಿ, ಮಕ್ಕಳಿಂದ ಉತ್ತರ ಹೇಳಿಸಿ.

೧) ಹಳ್ಳಿಯ ಹೆಸರೇನು?

೨) ಕೋಳಿ ಎಲ್ಲಿ ವಾಸವಾಗಿತ್ತು?

೩) ಕೋಳಿ ಏನನ್ನು ಬಿತ್ತಲು ಗುಬ್ಬಚ್ಚಿಯ ಸಹಾಯ ಕೇಳಿತು?

೪) ರಾಗಿಯ ಪೈರಿನಲ್ಲಿ ಏನು ಬಿಟ್ಟಿತು ?

೫) ಕೋಳಿ ಯಾರನ್ನು ಕೂಡಿಕೊಂಡು ರಾಗಿಯ ತೆನೆಗಳನ್ನು ಕೊಯ್ದಿತು?

೬) ಗುಬ್ಬಚ್ಚಿ ಮತ್ತು ಪಾರಿವಾಳಗಳಿಗೆ ಏನು ತಿಳಿಯಿತು?

೭) ಕೋಳಿಗೆ ಏನು ಅನಿಸಿತು?

ಆ) ಕೊಟ್ಟಿರುವ ವಾಕ್ಯಗಳಲ್ಲಿ ಬಿಟ್ಟಿರುವ ಪದಗಳನ್ನು ಹೇಳಿಸಿ.

೧) ಕೋಳಿ ರಾಗಿಯನ್ನು ಬಿತ್ತಲು ಗುಬ್ಬಚ್ಚಿಯ ____________ ಕೇಳಿತು.

೨) ಕೋಳಿ ತನ್ನ ಮರಿಗಳನ್ನು ಕೂಡಿಕೊಂಡು ____________ ಬಿತ್ತಿತು.


೩) ಒಂದು ದಿನ ಗುಬ್ಬಚ್ಚಿ ಮತ್ತು ಪಾರಿವಾಳಗಳಿಗೆ ತುಂಬಾ ____________.

೪) ____________ ಮತ್ತು ಪಾರಿವಾಳಗಳಿಗೆ ತಮ್ಮ ____________ ತಿಳಿಯಿತು.

ಇ) ಮಕ್ಕಳಿಂದ ಚಿತ್ರಗಳಿಗೆ ಸೂಕ್ತವಾದ ಬಣ್ಣ ತುಂಬಿಸಿ.


ತಾವರೆ


ಬಾಳೆಹಣ್ಣು



ಮೂಲಂಗಿ


ಕುಂಬಳ

(ಪಾಠ – ೩ : ಪಾಠಪೂರ್ವ ಚಟುವಟಿಕೆ)

ಅ) ಚಿತ್ರ ತೋರಿಸಿ, ಪದ ಹೇಳಿಸಿ.

೧



೧ ಮೂಗು

೨




೨ ಕಣ್ಣುಗಳು

೩




೩ ಎಲೆಗಳು

೪



೪ ಹೂಗಳು

೫



೫ ಕೈ ಬೆರಳುಗಳು

ಪದ್ಯ ಪಾಠ

ಪಾಠ ೩

ಊಟದ ಆಟ

ಕವಿ – ಜಿ.ಪಿ. ರಾಜರತ್ನಂ

(ಈ ಪದ್ಯವನ್ನು ರಾಗವಾಗಿ ಹಾಡಿ ಮಕ್ಕಳಿಂದ ಹೇಳಿಸಿ.)

ಒಂದು ಎರಡು
ಬಾಳೆಲೆ ಹರಡು

ಮೂರು ನಾಲ್ಕು
ಅನ್ನ ಹಾಕು

ಐದು ಆರು
ಬೇಳೆ ಸಾರು




ಏಳು ಎಂಟು
ಪಲ್ಯಕೆ ದಂಟು

ಒಂಬತ್ತು ಹತ್ತು
ಎಲೆ ಮುದಿರೆತ್ತು

ಒಂದರಿಂದ ಹತ್ತು
ಹೀಗಿತ್ತು

ಊಟದ ಆಟವು
ಮುಗಿದಿತ್ತು




ಕೇಳಿದ ಪದಗಳು :

ಒಂದು, ಎರಡು, ಬಾಳೆಲೆ, ಹರಡು, ಮೂರು, ನಾಲ್ಕು, ಅನ್ನ, ಹಾಕು, ಐದು, ಆರು, ಬೇಳೆ, ಸಾರು, ಏಳು, ಎಂಟು, ಪಲ್ಯ, ದಂಟು, ಒಂಬತ್ತು, ಹತ್ತು, ಎಲೆ, ಮುದಿರು, ಎತ್ತು, ಊಟ.

ಅರ್ಥ ತಿಳಿಯಿರಿ :

ಪಲ್ಯ–ತರಕಾರಿಯಿಂದ ಮಾಡಿದ ಪದಾರ್ಥ, ತಾಳದ ; ದಂಟು–ಒಂದು ಜಾತಿಯ ತರಕಾರಿ ಸೊಪ್ಪು ; ಮುದಿರು – ಮುಚ್ಚು, ಮಡಿಚು.

ಅಭ್ಯಾಸ

ಅ) ನೀಡಿರುವ ಪದಗಳನ್ನು ಹೇಳಿ, ಮಕ್ಕಳಿಂದ ಹೇಳಿಸಿ.

ಒಂದು, ಎರಡು, ಮೂರು, ನಾಲ್ಕು, ಐದು,
ಆರು, ಏಳು, ಎಂಟು, ಒಂಬತ್ತು, ಹತ್ತು.

ಆ) ಈ ಪ್ರಾಸಪದಗಳನ್ನು ಹೇಳಿ, ಮಕ್ಕಳಿಂದ ಹೇಳಿಸಿ.

೧) ಎರಡು–ಹರಡು
೨) ಆರು–ಸಾರು
೩) ಎಂಟು–ದಂಟು
೪) ಹತ್ತು–ಎತ್ತು

ಇ) ಪದ್ಯದ ಸಾಲುಗಳನ್ನು ಕೆಳಗೆ ನೀಡಿದೆ. ಆ ಸಾಲುಗಳಲ್ಲಿ ಒಂದೊಂದು ಪದವನ್ನು ಬಿಡಲಾಗಿದೆ. ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.

೧) ಒಂದು ಎರಡು ______ ಹರಡು.
೨) ಮೂರು ನಾಲ್ಕು ______ ಹಾಕು.
೩) ಐದು ಆರು ______ ಸಾರು.
೪) ಏಳು ಎಂಟು ______ ದಂಟು.
೫) ಒಂಬತ್ತು ಹತ್ತು ______ ಮುದಿರೆತ್ತು.

ಈ) ಚಿತ್ರಗಳನ್ನು ತೋರಿಸಿ, ಪಕ್ಕದಲ್ಲಿರುವ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರ ಪಡೆಯಿರಿ.




ಈ ಹಣ್ಣಿನ ಹೆಸರೇನು?
ಇಲ್ಲಿ ಎಷ್ಟು ಹಣ್ಣಿದೆ?




ಈ ಚಿತ್ರದಲ್ಲಿ ಏನಿದೆ?
ಇಲ್ಲಿ ಎಷ್ಟು ಹಣ್ಣುಗಳಿವೆ?



ಈ ಚಿತ್ರದಲ್ಲಿ ಎಷ್ಟು ಹಣ್ಣುಗಳಿವೆ?
ಈ ಹಣ್ಣಿನ ಹೆಸರೇನು?



ಈ ಚಿತ್ರದಲ್ಲಿ ಏನಿದೆ?
ಇಲ್ಲಿ ಎಷ್ಟು ಕಾಯಿಗಳಿವೆ?





ಈ ಚಿತ್ರದಲ್ಲಿರುವ ತರಕಾರಿಯ
ಹೆಸರೇನು?
ಇಲ್ಲಿ ಎಷ್ಟು ಕಾಯಿಗಳಿವೆ?

(ಪಾಠ – ೪ : ಪಾಠಪೂರ್ವ ಚಟುವಟಿಕೆ)

ಅ) ಈ ಚಿತ್ರಗಳಿಗೆ ಬಣ್ಣ ತುಂಬಲು ತಿಳಿಸಿ.







ಗದ್ಯ ಪಾಠ | ಪಾಠ ೪

ಹೂದೋಟ

(ಈ ಪಾಠದಲ್ಲಿರುವ ಸಂಭಾಷಣೆಯನ್ನು ಓದಿ ಹೇಳಿ, ಮಕ್ಕಳಿಂದ ಹೇಳಿಸಿ.)



ಸುಮಾ : ಅಜ್ಜೀ, ನೀವು ದಿನಾಲೂ ಸಂಜೆ ಹೂದೋಟಕ್ಕೆ ಬರುತ್ತೀರಿ ಅಲ್ಲವೆ?

ಅಜ್ಜಿ : ಹೌದು ಮಗು, ಹೂದೋಟಕ್ಕೆ ಬರಲು ನನಗೆ ತುಂಬಾ ಇಷ್ಟ.

ಸುಮಾ : ಅಜ್ಜಿ, ಇಲ್ಲಿ ಹಲವಾರು ಮಂದಿ ನಡೆಯುತ್ತಾರಲ್ಲ, ಏಕೆ?

ಅಜ್ಜಿ : ನಡೆಯುವುದು ದೇಹಕ್ಕೆ ಒಳ್ಳೆಯ ವ್ಯಾಯಾಮ. ಈ ವ್ಯಾಯಾಮ ಆರೋಗ್ಯಕ್ಕೆ ಅಗತ್ಯ.

ಸುಮಾ : ಅಜ್ಜಿ, ಅಲ್ಲಿ ಜೋಕಾಲಿ ಇದೆ, ನಾನು ಹೋಗಿ ಸ್ವಲ್ಪ ಹೊತ್ತು ಜೋಕಾಲಿ ಆಡಲೇ ?

ಅಜ್ಜಿ : ಆಡು ಮಗು. ನಾನು ಸ್ವಲ್ಪ ನಡೆದಾಡಿ ಬರುತ್ತೇನೆ.

(ಸ್ವಲ್ಪ ಸಮಯದ ಬಳಿಕ)

ಅಜ್ಜಿ : ಜೋಕಾಲಿ ಆಡಿದ್ದು ಆಯಿತೇ ಮಗು?

ಸುಮಾ : ಆಯಿತು ಅಜ್ಜಿ, ನಿಮ್ಮ ನಡೆದಾಟ ಆಯಿತೇ?

ಅಜ್ಜಿ : ಆಯಿತು ಮಗು, ಈಗ ಮನೆಗೆ ಹೋಗೋಣವೇ?

ಸುಮಾ : ಅಜ್ಜಿ, ನಾನು ದಿನಾಲೂ ನಿಮ್ಮ ಜೊತೆ ಹೂದೋಟಕ್ಕೆ ಬರುವೆ.

ಅಜ್ಜಿ : ನೀನು ತುಂಬಾ ಜಾಣೆ, ಮಕ್ಕಳು ಚಿಕ್ಕಂದಿನಿಂದಲೂ ಇಂಥ ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವುದು ಒಳ್ಳೆಯದು.

ಕೇಳಿದ ಪದಗಳು :

ಅಜ್ಜಿ, ದಿನಾಲೂ, ಸಂಜೆ, ನೀವು, ಹೂದೋಟ, ಹೌದು, ಮಗು, ಹಲವಾರು, ಮಂದಿ, ನಡೆ, ದೇಹ, ಒಳ್ಳೆಯ, ವ್ಯಾಯಾಮ, ಆರೋಗ್ಯ, ಅಗತ್ಯ, ಜೋಕಾಲಿ, ನಡೆದಾಟ, ಅಭ್ಯಾಸ, ಜಾಣೆ.

ಅರ್ಥ ತಿಳಿಯಿರಿ :

ದಿನಾಲೂ–ಪ್ರತಿದಿನ ; ಜೋಕಾಲಿ–ಉಯ್ಯಾಲೆ, ತೂಗುಮಣೆ.

ಅಭ್ಯಾಸ

ಅ) ಪಾಠದ ವಾಕ್ಯಗಳನ್ನು ಕೆಳಗೆ ನೀಡಿದೆ. ಬಿಟ್ಟಿರುವ ಪದವನ್ನು ಸೇರಿಸಿ ಮಕ್ಕಳಿಂದ ಹೇಳಿಸಿ.

೧) ಹೂದೋಟಕ್ಕೆ ಬರಲು ನನಗೆ ____________ ಇಷ್ಟ.

೨) ನಾನು ಹೋಗಿ ಸ್ವಲ್ಪ ಹೊತ್ತು ____________ ಆಡಲೇ?

೩) ನಿಮ್ಮ ____________ ಆಯಿತೇ?

೪) ನೀನು ತುಂಬಾ ____________

ಆ) ಮಕ್ಕಳಿಗೆ ಪ್ರಶ್ನೆ ಕೇಳಿ, ಉತ್ತರ ಹೇಳಿಸಿ.

೧) ಅಜ್ಜಿ ದಿನಾಲು ಸಂಜೆ ಎಲ್ಲಿಗೆ ಹೋಗುತ್ತಿದ್ದರು?

೨) ದೇಹಕ್ಕೆ ಒಳ್ಳೆಯ ವ್ಯಾಯಾಮ ಯಾವುದು?

೩) ಸುಮಾ ಯಾವ ಆಟ ಆಡಿದಳು?

ಇ) ಯಾರು ಯಾರಿಗೆ ಹೇಳಿದರು/ಕೇಳಿದರು ಎಂದು ಮಕ್ಕಳನ್ನು ಕೇಳಿ, ಉತ್ತರ ಪಡೆಯಿರಿ.

೧) ಅಜ್ಜೀ, ನೀವು ದಿನಾಲೂ ಸಂಜೆ ಹೂದೋಟಕ್ಕೆ ಬರುತ್ತೀರಿ ಅಲ್ಲವೆ ?
–ಎಂದು ಕೇಳಿದವರು ಯಾರು?

೨) ನಡೆಯುವುದು ದೇಹಕ್ಕೆ ಒಳ್ಳೆಯ ವ್ಯಾಯಾಮ. ಈ ವ್ಯಾಯಾಮ ಆರೋಗ್ಯಕ್ಕೆ ಅಗತ್ಯ. – **ಎಂದು ಹೇಳಿದವರು ಯಾರು**?

೩) ಮಕ್ಕಳು ಚಿಕ್ಕಂದಿನಿಂದಲೂ ಇಂಥ ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. – **ಎಂದು ಹೇಳಿದವರು ಯಾರು** ?

ಈ) ಈ ಕೆಳಗಿನ ವಾಕ್ಯಗಳನ್ನು ಓದಿ ಹೇಳಿ, ಮಕ್ಕಳಿಂದ ಹೇಳಿಸಿ.

೧) ನಾನು ದಿನಾಲೂ ಸ್ನಾನ ಮಾಡುತ್ತೇನೆ.

೨) ನಮ್ಮ ಊರಿನಲ್ಲಿ ಹಲವಾರು ಮನೆಗಳಿವೆ.

೩) ನನ್ನ ಗೆಳತಿ ತುಂಬಾ ಜಾಣೆ.

ಈ) ಚಿತ್ರಗಳಲ್ಲಿರುವ ಹೂಗಳನ್ನು ಹೆಸರಿಸಲು ಹೇಳಿ.













ಪಾಠ
೫


ರೇಖಾಭ್ಯಾಸ ಪಾಠಗಳು

ತೋಚಿದಂತೆ ಗೀಚು


(ಮಕ್ಕಳು ತಮ್ಮ ಮನಸ್ಸಿಗೆ ಬಂದಂತೆ ಗೆರೆ ಎಳೆಯಲು ಹೇಳಿ)


ತೋರಿಸಿ – ಬರೆಯಿಸಿ

ರೇಖಾಭ್ಯಾಸ – ೧





ರೇಖಾಭ್ಯಾಸ – ೨






ರೇಖಾಭ್ಯಾಸ – ೩







ರೇಖಾಭ್ಯಾಸ – ೪




ರೇಖಾಭ್ಯಾಸ – ೫






(ಪಾಠ : 6 ಪದ್ಯಪಾಠ – ಪಾಠಪೂರ್ವ ಚಟುವಟಿಕೆ)

ಅ) ಚಿತ್ರಕ್ಕೆ (ಕೇಸರಿ ಹಸಿರು ಮತ್ತು ನೀಲಿ) ಬಣ್ಣ ಹಾಕಲು ಹೇಳಿ.



ಆ) ಮಕ್ಕಳಿಗೆ ಇಷ್ಟವಾದ ಬಣ್ಣದಿಂದ ಚಿತ್ರ ತುಂಬಿಸಲು ಹೇಳಿ.



ಪದ್ಯ ಪಾಠ

ಪಾಠ ೬

ಏರುತಿಹುದು ಹಾರುತಿಹುದು

ಕವಿ : ಕಯ್ಯಾರ ಕಿಞ್ಞಣ್ಣ ರೈ

(ಪದ್ಯವನ್ನು ಹಾಡಿ, ಮಕ್ಕಳಿಂದ ಹಾಡಿಸಿ.)

ಏರುತಿಹುದು ಹಾರುತಿಹುದು
ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ



ಕೇಸರಿ ಬಿಳಿ ಹಸಿರು ಮೂರು
ಬಣ್ಣ ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗಮೂರ್ತಿ
ಗಾಂಧಿ ಹಿಡಿದ ಚರಕವು

ಇಂಥ ಧ್ವಜವು ನಮ್ಮ ಧ್ವಜವು
ನೋಡು ಹಾರುತಿರುವುದು
ಧ್ವಜದ ಭಕ್ತಿ ನಮ್ಮ ಶಕ್ತಿ
ನಾಡಗುಡಿಯ ಮೆರೆವುದು

ಕೆಂಪು ಕಿರಣ ತುಂಬಿ ಗಗನ
ಹೊನ್ನ ಬಣ್ಣವಾಗಿದೆ
ನಮ್ಮ ನಾಡಗುಡಿಯ ನೋಡ
ನೋಡಿರಣ್ಣ ಹೇಗಿದೆ!

ಕೇಳಿದ ಪದಗಳು :

ಏರು, ಹಾರು, ನೋಡು, ನಮ್ಮ, ಬಾವುಟ, ತೋರು, ಹೊಡೆದು, ಬಾನು, ಅಗಲ, ಪಟಪಟ, ಕೇಸರಿ, ಬಿಳಿ, ಹಸಿರು, ಮೂರು, ಬಣ್ಣ, ನಡುವೆ, ಚಕ್ರ, ಸತ್ಯ, ಶಾಂತಿ, ತ್ಯಾಗ, ಮೂರ್ತಿ, ಗಾಂಧಿ, ಚರಕ, ಧ್ವಜ, ಭಕ್ತಿ, ಶಕ್ತಿ, ನಾಡ, ಗುಡಿ, ಮೆರೆ, ಕೆಂಪು, ಕಿರಣ, ತುಂಬು, ಗಗನ, ಹೊನ್ನ, ಹೇಗೆ.

ಅರ್ಥ ತಿಳಿಯಿರಿ :

ಬಾನು–ಆಕಾಶ; ನಾಡು–ದೇಶ; ಗುಡಿ–ಧ್ವಜ; ಧ್ವಜ–ಬಾವುಟ; ಗಗನ–ಆಕಾಶ; ಹೊನ್ನು–ಚಿನ್ನ.

ಅಭ್ಯಾಸ

ಅ) ಪದ್ಯದ ಸಾಲುಗಳಲ್ಲಿ ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.

೧) ತೋರುತಿಹುದು ಹೊಡೆದು ಹೊಡೆದು
ಬಾನಿನಗಲ __________

೨) ಇಂಥ __________ ನಮ್ಮ __________
ನೋಡು ಹಾರುತಿರುವುದು

೩) ನಮ್ಮ ನಾಡ __________ ನೋಡ
ನೋಡಿರಣ್ಣ ಹೇಗಿದೆ !

ಆ) ಮಕ್ಕಳಿಗೆ ಪ್ರಶ್ನೆ ಕೇಳಿ, ಉತ್ತರ ಹೇಳಿಸಿ.

೧) ಏರುತಿಹುದು, ಹಾರುತಿಹುದು ಏನು?

೨) ಮೂರು ಬಣ್ಣಗಳ ನಡುವೆ ಏನಿದೆ?

೩) ಯಾರು ಹಿಡಿದ ಚರಕ?

೪) ಗಗನ ಯಾವ ಬಣ್ಣವಾಗಿದೆ?

ಇ) 'ಅ' ಪಟ್ಟಿಯಲ್ಲಿರುವ ಸಾಲುಗಳನ್ನು ಒಂದನೆಯ ಗುಂಪಿನಿಂದಲೂ , 'ಆ' ಪಟ್ಟಿಯ ಸಾಲುಗಳನ್ನು ಎರಡನೆಯ ಗುಂಪಿನಿಂದಲೂ ಮತ್ತು 'ಇ' ಪಟ್ಟಿಯ ಸಾಲುಗಳನ್ನು ಮೂರನೆಯ ಗುಂಪಿನಿಂದಲೂ ಹೇಳಿಸಿ.

ಅ	ಆ	ಇ
ಏರುತಿಹುದು ಹಾರುತಿಹುದು	ನೋಡು ನಮ್ಮ	ಬಾವುಟ
ತೋರುತಿಹುದು ಹೊಡೆದು ಹೊಡೆದು	ಬಾನಿನಗಲ	ಪಟಪಟ
ಕೇಸರಿ ಬಿಳಿ ಹಸಿರು ಮೂರು	ಬಣ್ಣ ನಡುವೆ	ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ	ಗಾಂಧಿ ಹಿಡಿದ	ಚರಕವು
ಇಂಥ ಧ್ವಜವು ನಮ್ಮ ಧ್ವಜವು	ನೋಡು	ಹಾರುತಿರುವುದು
ಧ್ವಜದ ಭಕ್ತಿ ನಮ್ಮ ಶಕ್ತಿ	ನಾಡ ಗುಡಿಯ	ಮೆರೆವುದು

ಈ) ಕೊಟ್ಟಿರುವ ಪ್ರಾಸ ಪದಗಳನ್ನು ಹೇಳಿಸಿ.

ಬಾವುಟ–ಪಟಪಟ

ಚಕ್ರವು–ಚರಕವು

ಇರುವುದು–ಮೆರೆವುದು

ಆಗಿದೆ–ಹೇಗಿದೆ

ಉ) ಕೆಳಗಿನ ಸಾಲುಗಳನ್ನು ಮಕ್ಕಳಿಗೆ ಹೇಳಿ, ಅವರಿಂದ ಹೇಳಿಸಿ.

೧) ನಮ್ಮ ದೇಶ ಭಾರತ


೨) ನಮ್ಮ ರಾಜ್ಯ ಕರ್ನಾಟಕ

೩) ನಮ್ಮ ಜಿಲ್ಲೆ ____________

೪) ನಮ್ಮ ಊರು ____________

(ಪಾಠ – ೭ : ಪಾಠಪೂರ್ವ ಅಭ್ಯಾಸ)


ಅ) ಚಿತ್ರಗಳನ್ನು ತೋರಿಸಿ, ಪಕ್ಕದಲ್ಲಿರುವ ಪ್ರಶ್ನೆಗಳನ್ನು ಕೇಳಿ, ಮಕ್ಕಳಿಂದ ಉತ್ತರ ಪಡೆಯಿರಿ.




ಈ ಪ್ರಾಣಿಯ ಹೆಸರೇನು?



ಈ ಪ್ರಾಣಿಯ ಹೆಸರೇನು?



ಈ ಚಿತ್ರದಲ್ಲಿರುವುದೇನು?




ಈ ಚಿತ್ರದಲ್ಲಿರುವುದೇನು?

ಗದ್ಯ ಪಾಠ

ಪಾಠ ೭

ಕೋತಿ ಮತ್ತು ಅಳಿಲು

(ಪಾಠವನ್ನು ಓದಿ ಹೇಳಿ, ಮಕ್ಕಳಿಂದ ಹೇಳಿಸಿ)



ಒಂದು ಕೋತಿ ಮರದ ಮೇಲೆ ಕುಳಿತಿತ್ತು. ಆ ಕೋತಿಯ ಬಾಲ ತುಂಬಾ ಉದ್ದವಿತ್ತು. ಅದು ನೆಲದವರೆಗೆ ನೇತಾಡುತ್ತಿತ್ತು.

ಒಂದು ಅಳಿಲು ಕುಣಿದಾಡುತ್ತಾ ಅಲ್ಲಿಗೆ ಬಂದಿತು. ಅದು ಬಾಲ ನೋಡಿತು. "ಈ ಜೋಕಾಲಿ ಎಷ್ಟು ಚಂದ!" ಎಂದು ಯೋಚಿಸಿತು.ಕೋತಿಯ ಬಾಲ ಹಿಡಿದು ಅಳಿಲು ಜೀಕತೊಡಗಿತು.

ಕೋತಿಗೆ ಕಚಗುಳಿ ಆಯಿತು. ಅದು ಕೆಳಗೆ ನೋಡಿತು ಮತ್ತು ನಗುತ್ತಾ ಹೇಳಿತು, "ತಂಗಿ, ಏನು ಮಾಡುತ್ತಿರುವೆ? ನನಗೆ ಕಚಗುಳಿಯಾಗುತ್ತಿದೆ." ಆಗ ಅಳಿಲಿಗೆ ಗಾಬರಿಯಾಯಿತು.

"ಮಂಗಣ್ಣಾ, ಇದು ನಿನ್ನ ಬಾಲವೇ? ಜೋಕಾಲಿ ಎಂದು ತಿಳಿದು ಜೀಕುತ್ತಿದ್ದೆ. ನನ್ನನ್ನು ಕ್ಷಮಿಸು" ಎಂದು ಹೇಳಿತು. ಬಾಲವನ್ನು ಬಿಟ್ಟಿತು.

ಅಳಿಲು ಓಡಿಹೋಗಿ, ಮರದ ಕೊಂಬೆಯನ್ನು ಏರಿತು.

ಕೇಳಿದ – ಹೇಳಿದ ಪದಗಳು :

ಕೋತಿ, ಮರ, ಮೇಲೆ, ಕುಳಿತಿರು, ಬಾಲ, ಉದ್ದ, ಅದು, ನೆಲ, ನೇತಾಡು, ಅಳಿಲು, ಕುಣಿದಾಡು, ಅಲ್ಲಿಗೆ, ಬಂದಿತು, ನೋಡು, ಜೋಕಾಲಿ, ಎಷ್ಟು, ಚಂದ, ಯೋಚಿಸು, ಜೀಕು, ಕಚಗುಳಿ, ಆಯಿತು, ಕೆಳಗೆ, ನಗು, ಹೇಳು, ತಂಗಿ, ಏನು, ಮಾಡು, ಗಾಬರಿ, ಮಂಗಣ್ಣಾ, ಇದು, ತಿಳಿ, ಕ್ಷಮಿಸು, ಆಗು, ಬಿಡು.

ಅರ್ಥ ತಿಳಿಯಿರಿ :

ಕಚಗುಳಿ–ಚಕ್ಕಲಗುಳಿ; ಗಾಬರಿ–ಹೆದರಿಕೆ; ಕ್ಷಮಿಸು–ಅಪರಾಧವನ್ನು ಮನ್ನಿಸು

ಅಭ್ಯಾಸ

ಅ) ಆ ವಾಕ್ಯಗಳಲ್ಲಿನ ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.

೧) ಆ ಕೋತಿಯ ಬಾಲ _____ ಉದ್ದವಿತ್ತು.

೨) ಒಂದು ಅಳಿಲು ________ ಅಲ್ಲಿಗೆ ಬಂದಿತು.

೩) ಕೋತಿಗೆ _______ ಆಯಿತು.

೪) ಮಂಗಣ್ಣಾ, ಇದು ____ ಬಾಲವೇ?

ಆ) ಮಕ್ಕಳಿಗೆ ಪ್ರಶ್ನೆ ಕೇಳಿ ಉತ್ತರ ಹೇಳಿಸಿ.

೧) ಕೋತಿ ಯಾವುದರ ಮೇಲೆ ಕುಳಿತಿತ್ತು?

೨) ಕೋತಿಯ ಬಾಲ ಹಿಡಿದು ಯಾವುದು ಜೀಕತೊಡಗಿತು?

೩) "ಮಂಗಣ್ಣಾ ಇದು ನಿನ್ನ ಬಾಲವೇ? ಜೋಕಾಲಿ ಎಂದು ತಿಳಿದು ಜೀಕುತ್ತಿದ್ದೆ. ನನ್ನನ್ನು ಕ್ಷಮಿಸು" ಎಂದು ಯಾವುದು ಹೇಳಿತು?

೪) ಅಳಿಲು ಹೇಗೆ ಹೋಗಿ ಮರದ ಕೊಂಬೆಯನ್ನು ಏರಿತು?

ಇ) ಮಾದರಿಯಂತೆ ವಾಕ್ಯಗಳನ್ನು ಮಾಡಿ ಮಕ್ಕಳಿಂದ ಹೇಳಿಸಿ.

ಮಾದರಿ :– **ಕೋತಿ– ಮರ– ಬಾಲ**

೧) ಕೋತಿ ಒಂದು ಪ್ರಾಣಿ

೨) ಕೋತಿಯು ಮರವನ್ನು ಹತ್ತುತ್ತದೆ

೩) ಕೋತಿಗೆ ಬಾಲವಿದೆ

ಈ) ಈ ಪದಗಳನ್ನು ಬಳಸಿ, ಮಕ್ಕಳಿಂದ ವಾಕ್ಯಗಳನ್ನು ಮಾಡಿಸಿ ಹೇಳಿಸಿ.

ಅಳಿಲು, ಮರ, ಬಾಲ

ಅಕ್ಷರ ಪಾಠ | ಪಾಠ ೮



ಓದಿಸಿ-ಬರೆಯಿಸಿ

ಪದ ಓದು - ಅಕ್ಷರ ಕಲಿ

ಅಕ್ಷರಾಭ್ಯಾಸ-೧

ರ	ಗ	ಸ	ದ	ಅ

ಅ) ಚಿತ್ರ ತೋರಿಸಿ ಪದ ಹೇಳಿಸಿ.

ರ		ರಸ
ಗ		ಗರಗಸ
ಸ		ಸರ
ದ		ದಸರ
ಅ		ಅರ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ರ	ರ	ರ	ರ	ರ
ಗ	ಗ	ಗ	ಗ	ಗ
ಸ	ಸ	ಸ	ಸ	ಸ

ದ	ದ	ದ	ದ	ದ
ಅ	ಅ	ಅ	ಅ	ಅ

ಇ) ಈ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ರ ಗ ಸ ದ ಅ

ಈ) ಈ ಪದಗಳನ್ನು ಓದಿಸಿ.

ಅರ ಗರ ಸರ ರಸ ದರ

ಸಗರ ದಸರ ಅರಸ ಸರಸ ಸದರ

ಗರಗರ ಗರಗಸ ಸರಸರ ದರದರ

ಉ) ಅಡಿಗೆರೆ ಎಳೆದಿರುವ ಅಕ್ಷರಗಳನ್ನು ಗುರುತಿಸಲು ಮತ್ತು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ದಸರ ಗರಗಸ ರಸ ದರ ಅರ

ಊ) ಬಿಟ್ಟಿರುವ ಅಕ್ಷರಗಳನ್ನು ಆವರಣದಲ್ಲಿ ನೀಡಿರುವ ಅಕ್ಷರಗಳಲ್ಲಿ ಸೂಕ್ತವಾದುದನ್ನು ಗುರುತಿಸಿ ಹೇಳಿಸಿ ಮತ್ತು ಬರೆಯಿಸಿ.

೧) ಗ_____ಗಸ (ರ, ದ, ಅ)



೨) ಸ __ ರ (ರ, ಗ, ಸ)

೩) ಅರ __ (ರ, ಸ, ದ)

೪) __ ಸರ (ಸ, ದ, ಗ)

೫) __ ರ (ಸ, ಗ, ರ,)

ಋ) 'ಅ' ಪಟ್ಟಿಯಲ್ಲಿ ಚಿತ್ರಗಳನ್ನೂ, 'ಆ' ಪಟ್ಟಿಯಲ್ಲಿ ಪದಗಳನ್ನು ಕೊಟ್ಟಿದೆ. ಚಿತ್ರಕ್ಕೆ ಹೊಂದುವ ಪದವನ್ನು ಗುರುತಿಸಿ, ಹೇಳಿಸಿ ಮತ್ತು ಚಿತ್ರದ ಕೆಳಗೆ ಬರೆಯಿಸಿ.

'ಅ ಪಟ್ಟಿ'	'ಆ ಪಟ್ಟಿ'
 ______	ಸರ
 ______	ಗರಗಸ
 ______	ಅರ
 ______	ರಸ

ಎ) ಅರ್ಥ ತಿಳಿಯಿರಿ :

ದಸರ–ಒಂದು ಹಬ್ಬ; ಅರ–ಉಕ್ಕಿನ ಉಪಕರಣ; ಸಗರ–ಒಂದು ಹೆಸರು, ಗರಗಸ–ಮರ ಕೊಯ್ಯುವ ಸಾಧನ.

ಅಕ್ಷರಾಭ್ಯಾಸ–೨

ಜ	ವ	ಮ	ಬ	ನ

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಜ




ಜನ

ವ




ವನ

ಮ




ಮರ

ಬ



ಬಸವ

ನ



ನಗರ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ಬರೆಯಿಸಿ.

ಜ	ಜ	ಜ	ಜ	ಜ
ವ	ವ	ವ	ವ	ವ
ಮ	ಮ	ಮ	ಮ	ಮ
ಬ	ಬ	ಬ	ಬ	ಬ
ನ	ನ	ನ	ನ	ನ

ಇ) ಈ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಜ ವ ಮ ಬ ನ

ಈ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಜನ	ಜವ	ಜಗ	ಅಜ
ವನ	ವರ	ವನಜ	
ಮನ	ಮರ	ಮಗ	
ಬನ	ಬರ	ನವ	
ನರ	ನಗ		

ಉ) ಅಡಿಗೆರೆ ಎಳೆದಿರುವ ಅಕ್ಷರಗಳನ್ನು ಗುರುತಿಸಲು ಮತ್ತು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಜನ	ವನ	ಮರ	ಬಸವ
ನಗರ	ಗಗನ	ದಸರ	ಸರಸ
ದವಸ	ಅವಸರ		

ಊ) ನೀಡಿರುವ ಪದಗಳಲ್ಲಿ ಬಿಟ್ಟಿರುವ ಅಕ್ಷರವನ್ನು ಆವರಣದಲ್ಲಿರುವ ಅಕ್ಷರಗಳಿಂದ ಗುರುತಿಸಿ ಹೇಳಿಸಿ ಮತ್ತು ಬರೆಯಿಸಿ.

೧) ಗ ___ (ಜ , ಅ, ವ)

೨) ಬಸ ___ (ಜ, ವ, ಅ)

೩) ರ ___ (ವ, ಬ, ಸ)


೪) ___ ರ (ಬ, ರ, ಜ)

೫) ಜ ___ (ನ, ಅ, ಬ)

ಋ) ಅರ್ಥ ತಿಳಿಯಿರಿ.

ದವಸ–ಧಾನ್ಯ, ಕಾಳುಕಡ್ಡಿ; ಅವಸರ–ಸಮಯ, ಆತುರ; ಜಪ–ಮಂತ್ರವನ್ನು ಉಚ್ಚರಿಸುವ ಕ್ರಮ; ವನಜ–ತಾವರೆ; ಬನ–ವನ; ನವ–ಒಂಬತ್ತು, ಹೊಸತು; ನರ–ಮನುಷ್ಯ; ನಗ–ಒಡವೆ



ಎ) ಬಣ್ಣ ಹಚ್ಚಿ.



ಅಕ್ಷರಾಭ್ಯಾಸ-೩

ಪ	ಯ	ಉ	ಡ	ಟ	ಚ

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಪ	ಯ	ಉ
		
ಪಟ	ಯಮ	ಉಡ
ಡ	ಟ	ಚ
		
ಡಮಡಮ	ಟಪಟಪ	ಚಮಚ

ಅ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಪ	ಪ	ಪ	ಪ	ಪ
ಪ				
ಯ	ಯ	ಯ	ಯ	ಯ
ಯ				
ಉ	ಉ	ಉ	ಉ	ಉ
ಉ				
ಡ	ಡ	ಡ	ಡ	ಡ
ಡ				
ಟ	ಟ	ಟ	ಟ	ಟ
ಟ				
ಚ	ಚ	ಚ	ಚ	ಚ
ಚ				

ಇ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಪ ಯ ಉ ಡ ಟ ಚ

ಪ

ಚ

ಈ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಪದ	ಪಟ	ಜಪ	ಪಚನ
ಪದರ	ನಯ	ಜಯ	ನಯನ
ಉಡ	ಉದಯ	ಉರಗ	ಉರ
ಡಬಡಬ	ಡವಡವ	ನಟ	ನಟನ
ಟಪಟಪ	ಚರ	ಚದರ	ವಚನ

ಉ) ಕೆಳಗೆ ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಿ ಬರೆಯಲು ಹೇಳಿ.

ಪದ ಯಮ ಉಡ ಜಡ ಪಟ ಚರ

ಜಪ   ನಯ   ಉರ   ಚಮಚ

ಊ) ಪದಗಳಲ್ಲಿ ಬಿಟ್ಟಿರುವ ಅಕ್ಷರವನ್ನು ಆವರಣದಲ್ಲಿ ನೀಡಲಾಗಿದೆ. ಸೂಕ್ತ ಅಕ್ಷರವನ್ನು ಗುರುತಿಸಿ, ಹೇಳಿಸಿ ಮತ್ತು ಬರೆಯಿಸಿ.

೧) ___ ಟ   (ಡ , ಪ, ಯ)

೨) ನ ___ ನ   (ಚ, ಪ, ಯ)

೩) ___ ರ ಗ   (ಉ, ಯ, ಚ)

೪) ಬ ___ ವ   (ಬ, ಡ, ಜ)

೫) ಉ ___ ಯ   (ಡ, ದ, ಟ)

೬) ವ ___ ನ   (ಉ, ಚ, ಯ)

ಋ) ಅರ್ಥ ತಿಳಿಯಿರಿ.

ಪಟ–ಗಾಳಿಪಟ ; ಪಚನ–ಅರಗುವಿಕೆ ; ನಯನ–ಕಣ್ಣು ; ಉದಯ–ಬೆಳಗು;

ಉರಗ–ಹಾವು ; ಉರ–ಎದೆ ; ವಚನ–ಮಾತು.

ಅಕ್ಷರಾಭ್ಯಾಸ–೪

ಲ	ಈ	ಊ	ಕ

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಲ

ಲ

ಈ



ಈಚಲ

ಊ



ಊಟ

ಕ



ಕಡಗ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಲ	ಲ	ಲ	ಲ	ಲ
ಲ				
ಈ	ಈ	ಈ	ಈ	ಈ
ಈ				
ಊ	ಊ	ಊ	ಊ	ಊ
ಊ				
ಕ	ಕ	ಕ	ಕ	ಕ
ಕ				

ಇ) ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಲ ಈ ಊ ಕ

ಈ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಲವ	ಅಗಲ	ಕಲರವ	ಲಕಲಕ	ಈಗ
ಈರ	ಈಚಲ	ಊಟ	ಊನ	ಕದ
ಕರ	ಕದನ	ಕರಗ	ಕಟಕ	ಕರಟ

ಉ) ಕೆಳಗಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ ಮತ್ತು ಬರೆಯಿಸಿ.

ಅಗಲ ಈರ ಊಟ ಕಮಲ

ಊ) ಕೆಳಗೆ ನೀಡಿರುವ ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೇರಿಸಿ ಹೇಳಿಸಿ ಮತ್ತು ಬರೆಯಿಸಿ.

೧) ____ ವ

೨) ____ ರ

೩) ____ ಮಲ

೪) ____ ಕ ____ ಕ

೫) ____ ಗ

೬) ____ ಟ

೭) ____ ದನ

ಋ) ಕೆಳಗೆ ನೀಡಿರುವ ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಆವರಣದಲ್ಲಿ ಕೊಡಲಾಗಿದೆ. ಸೂಕ್ತ ಅಕ್ಷರವನ್ನು ಗುರುತಿಸಿ ಹೇಳಿಸಿ ಮತ್ತು ಬರೆಯಿಸಿ.


೧) ____ ದ (ಕ, ಅ, ಊ)

೨) ____ ಗ (ಕ, ಈ, ಅ)

೩) ____ ಟಕ (ಕ, ಈ, ಅ)

೪) ____ ರಟ (ಈ, ಕ, ಅ)

ಎ) ಚಿತ್ರ ಪೂರ್ತಿ ಮಾಡಿ ಬಣ್ಣ ಹಚ್ಚಲು ತಿಳಿಸಿ.




ಅಕ್ಷರಾಭ್ಯಾಸ-೫

ಎ	ಏ	ಇ	ಆ	ತ	ಳ


ಅ) ಚಿತ್ರ ತೋರಿಸಿ ಪದ ಹೇಳಿಸಿ.

ಎ



ಎರಕ

ಏ




ಏತ

ಇ



ಇನ

ಆ




ಆಲ

ತ



ತಬಲ

ಳ



ನಳ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಎ	ಎ	ಎ	ಎ	ಎ
ಎ				
ಏ	ಏ	ಏ	ಏ	ಏ
ಏ				
ಐ	ಐ	ಐ	ಐ	ಐ
ಐ				

ಆ	ಆ	ಆ	ಆ	ಆ
ಆ				
ತ	ತ	ತ	ತ	ತ
ತ				
ಛ	ಛ	ಛ	ಛ	ಛ
ಛ				

ಇ) ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಎ ಏ ಇ ಆ ತ ಛ

ಈ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.



ಎರಕ,	ಎಡಬಲ,	ಐತ,	ಐಕದಳ,
ಇನ,	ಆಳ,	ಆತ,	ಆಲ,
ಆಗಸ,	ತಬಲ,	ತವಕ,	ತನಯ,
ನಳ,	ಸಳ,	ಕಳಸ,	ಬಳಪ.

ಉ) ಕೆಳಗಿನ ಪದಗಳನ್ನು ಓದಿಸಿ, ಬರೆಯಲು ತಿಳಿಸಿ.

ದಳ ಮತ ಆಟ ಐತ

ಆಲ ಎಡ ಇನ ತಳ

ಊ) 'ಅ' ಪಟ್ಟಿಯಲ್ಲಿ ಪದಗಳನ್ನು 'ಆ' ಪಟ್ಟಿಯಲ್ಲಿ ಚಿತ್ರಗಳನ್ನು ಕೊಟ್ಟಿದೆ. ಚಿತ್ರಕ್ಕೆ ಹೊಂದುವ ಪದವನ್ನು ಗುರುತಿಸಿ, ಹೇಳಿಸಿ, ಮತ್ತು ಚಿತ್ರದ ಪಕ್ಕದಲ್ಲಿ ಬರೆಯಿಸಿ.

'ಅ'	'ಆ'	
ಆಲ		______________
ತಬಲ		______________
ನಳ		______________
ಏರಕ		______________
ಏತ		______________
ಇನ		______________

ಋ) ಪದಗಳನ್ನು ಓದಿಸಿ, ಬರೆಯಿಸಿ.

೧. ಎಡ – ______________

೨. ಇನ – ______________

೩. ತಳ – ______________

ಎ) ಸೂಕ್ತ ಅಕ್ಷರಗಳನ್ನು ಆರಿಸಲು ಹೇಳಿ, ಪದ ಬರೆಯಿಸಿ.

೧. ಆ____ (ಟ, ದ, ಪ) : ____________________


೨. ತ____ (ಎ, ಳ, ಯ) : ____________________

೩. ಏ____ (ತ, ಆ, ಕ) : ____________________

೪. ದ____ (ಳ, ಎ, ಇ) : ____________________

೫. ಇ____ (ಟ, ನ, ಪ) : ____________________

ಏ) ಚುಕ್ಕೆಗಳನ್ನು ಸೇರಿಸಿ, ಬಣ್ಣ ಹಚ್ಚಲು ತಿಳಿಸಿ.




ಅಕ್ಷರಾಭ್ಯಾಸ–೬

ಓ	ಔ	ಹ	ಶ	ಷ

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಓ




ಓಟ

ಔ




ಔಡಲ

ಹ



ಹಯ

ಶ



ಶರ

ಷ

ಆ) ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಓ	ಓ	ಓ	ಓ	ಓ
ಓ				
ಔ	ಔ	ಔ	ಔ	ಔ
ಔ				
ಥ	ಥ	ಥ	ಥ	ಥ
ಥ				
ಶ	ಶ	ಶ	ಶ	ಶ
ಶ				
ಷ	ಷ	ಷ	ಷ	ಷ
ಷ				

ಆ) ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಓ ಔ ಹ ಶ ಷ

ಅಭ್ಯಾಸ

ಅ) ಈ ಅಕ್ಷರಗಳನ್ನು ಗುರುತಿಸಿ, ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಓಟ ಓಲಗ ಔಡಲ ಔರಸ

ಹರ ಹದ ಹಯ ಹವಳ

ಶಕ ಶರ ಶಕಟ ಶಯನ ಶಬರ ಉಷ

ಆ) ಪದಗಳನ್ನು ಗುರುತಿಸಲು, ಸ್ಪಷ್ಟವಾಗಿ ಉಚ್ಚರಿಸಲು ಹೇಳಿ, ಪದಗಳನ್ನು ಬರೆಯಿಸಿ.

ಓ ಟ ಹ ಯ ಶ ರ ಔ ಡ ಲ

ಇ) ಪದಗಳನ್ನು ಓದಿಸಿ-ಬರೆಯಿಸಿ.

ಓಟ ಹದ ಆಶ ಉಷ ಹವಳ


ಈ) ಚಿತ್ರ ಪೂರ್ಣ ಮಾಡಿ ಬಣ್ಣ ಹಾಕಿಸಿ.



ಅಕ್ಷರಾಭ್ಯಾಸ-೭


ಐ	ಝ	ಣ	ಛ	ಒ


ಅ) ಚಿತ್ರ ತೋರಿಸಿ ಪದ ಹೇಳಿಸಿ.

ಐ 

ಐದಳ

ಝ

ಣ  ಕಣ

ಒ 

ಒಣಮರ

ಛ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ಬರೆಯಿಸಿ.

ಐ	ಐ	ಐ	ಐ	ಐ
ಐ				
ಋ	ಋ	ಋ	ಋ	ಋ
ಋ				
ಣ	ಣ	ಣ	ಣ	ಣ
ಣ				
ಛ	ಛ	ಛ	ಛ	ಛ
ಛ				
ಒ	ಒ	ಒ	ಒ	ಒ
ಒ				

ಇ) ಈ ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಐ ಋ ಣ ಛ ಒ

ಅಭ್ಯಾಸ

ಅ) ಪದಗಳನ್ನು ಹೇಳಿಸಿ ಮತ್ತು ಬರೆಯಲು ತಿಳಿಸಿ.

ಐದಳ ಋಣ ಕಣ ಬಡಗಣ ಛಲ

ಆ) ಕೊಟ್ಟಿರುವ ಅಕ್ಷರಗಳ ಸಹಾಯದಿಂದ ಮಾದರಿಯಂತೆ ಸಾಧ್ಯವಾದಷ್ಟು ಪದಗಳನ್ನು ರಚಿಸಲು ತಿಳಿಸಿ.

ದ	ಜ	ವ	ಸ	ಅ
ಒ	ಮ	ಣ	ರ	ಕ

ಮಾದರಿ : ಕಣಜ

೧ ________ ೨________

೩ ________ ೪________

೫ ________ ೬________

೭ ________ ೮________

ಇ) ಕೊಟ್ಟಿರುವ ಪದಗಳನ್ನು ನಕಲು ಮಾಡಿಸಿ, ಓದಿಸಿ.

ಝಣ ಮಣ ಝತ ಛಲ

ಕಣ ಒಣ ಹಣ ಬಣ

ಈ) ಕೊಟ್ಟಿರುವ ಸರಳ ವಾಕ್ಯಗಳನ್ನು ಓದಿಸಿ.

ಅವಳ ಸರ

ಅವಳ ಸರ ಹವಳದ ಸರ

ಹವಳದ ಸರ ಪಳ ಪಳ

ಅವನ ಪಟ

ಅವನ ಪಟ ತರತರದ ಪಟ


ತರತರದ ಪಟ ಬಹಳ ಅಗಲ

ಉ) ಅಕ್ಷರದ ಮನೆಯಿಂದ ಎರಡೆರಡು ಅಕ್ಷರಗಳನ್ನು ಆಯ್ದು ಮಾದರಿಯಂತೆ ಪದಸರ ಮಾಡಿಸಿ.

ರ	ಪ	ಎ	ಣ	ನ	
ಜ	ಗ	ಯ	ಏ	ಒ	
ಲ	ವ	ಸ	ಉ	ಇ	
ಓ	ಟ	ಮ	ದ	ಡ	ಆ
ಕ	ಹ	ಊ	ಬ	ಅ	ಚ

ಮಾದರಿ:

ಗಜ –> ಜನ –> ನರ –> ರಜ –> ಜಪ –> ಪಟ



ಅಕ್ಷರಾಭ್ಯಾಸ–೮

ಧ	ಥ	ಢ	ಭ


ಅ) ಚಿತ್ರ ತೋರಿಸಿ ಪದ ಹೇಳಿಸಿ.

ಧ




ಧನ

ಥ




ರಥ

ಢ



ಢಣಢಣ

ಭ



ಭಟ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ಬರೆಯಿಸಿ.

ಧ	ಧ	ಧ	ಧ	ಧ
ಧ				
ಥ	ಥ	ಥ	ಥ	ಥ
ಥ				
ಢ	ಢ	ಢ	ಢ	ಢ
ಢ				
ಭ	ಭ	ಭ	ಭ	ಭ
ಭ				

ಅಭ್ಯಾಸ

ಅ) ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಧನ	ಔಡಲ	ಥಳಥಳ	ಪಥ
ಕಥನ	ಢರಢರ	ಭಯ	ಭರತ

ಆ) ಬಿಟ್ಟು ಹೋಗಿರುವ ಅಕ್ಷರಗಳನ್ನು ಸೇರಿಸಿ ಪದ ಹೇಳಿಸಿ ಮತ್ತು ಬರೆಯಿಸಿ.

_____ನ,   ರ_____ ,   _____ಣ

_____ಣ,   _____ಯ

ಇ) ನೀಡಿರುವ ಪದಗಳನ್ನು ಗುರುತಿಸಿ ಬರೆಯಲು ಹೇಳಿ.

ಧವಳ   ಧನ   ಧಗಧಗ   ಮಥನ   ಥಳಥಳ

____

____

____


ಶಪಥ   ಭವ   ಭಜನ   ಭವನ   ಢಣಢಣ

____

____

____

ಈ) ಕೆಳಗಿನ ಚಿತ್ರಗಳಲ್ಲಿ ನೀಡಿರುವ ಅಕ್ಷರಗಳನ್ನು ಬಳಸಿ, ಮಾದರಿಯಂತೆ ಪದಗಳನ್ನು ರಚಿಸಲು ತಿಳಿಸಿ.



ಮಾದರಿ : ರಥ

೧__________ ೨__________

೩__________ ೪__________

೫__________ ೬__________

೭__________ ೮__________


೯__________ ೧೦__________

ಅಕ್ಷರಾಭ್ಯಾಸ–೯

ಘ ಠ ಫ ಝ ಖ


ಅ) ಚಿತ್ರ ತೋರಿಸಿ ಪದ ಹೇಳಿಸಿ.

ಘ



ಘಟ

ಠ



ಜಠರ

ಫ



ಫಲ

ಝ



ಝಣಝಣ

ಖ



ಖಗ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ಬರೆಯಿಸಿ.

ಘ	ಘ	ಘ	ಘ	ಘ
ಘ				
ಠ	ಠ	ಠ	ಠ	ಠ
ಠ				
ಫ	ಫ	ಫ	ಫ	ಫ
ಫ				
ಝ	ಝ	ಝ	ಝ	ಝ
ಝ				
ಖ	ಖ	ಖ	ಖ	ಖ
ಖ				

ಇ) ಅಕ್ಷರಗಳನ್ನು ಗುಂಡಾಗಿ ನಕಲು ಮಾಡಿಸಿ.

ಘ ಠ ಫ ಝ ಖ

ಈ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಜಠರ ಮಠ ಹಠ ಪಠಣ ಠಣಠಣ

ಘಟ ಘನ ಘಟಕ ಓಘ

ಫಲ ಫಳಫಳ ಕಫ ಸಫಲ ಝಳ

ಖಗ ಖರ ಖಳ ನಖ ಸಖ

ಉ) ಅಡಿಗೆರೆ ಎಳೆದಿರುವ ಅಕ್ಷರಗಳನ್ನು ಗುರುತಿಸಲು ಮತ್ತು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ :

ಮಠ	ಹಠ
ಘಟ	ಘನ
ಫಲ	ಕಫ
ಝಳ	ಖರ
ಖಗ	

ಊ) ನೀಡಿರುವ ಪದಗಳನ್ನು ಗುರುತಿಸಿ, ಬರೆಯಿಸಿ.

ಪಠಣ ಜಠರ ಠಣಠಣ ಅಘ

ಘಟಕ ಫಣಿ ಸಫಲ ಫಲಕ

ಝಳ ಝಣಝಣ ನಖ ಸಖ

ಅಕ್ಷರಾಭ್ಯಾಸ–೧೦

ಅಂ	ಅಃ	ಙ	ಞ

ಅ) ಅಕ್ಷರ ತೋರಿಸಿ ಹೇಳಿಸಿ.

ಅಂ	ಅಃ
ಙ	ಞ

ಆ) ಕೊಟ್ಟಿರುವ ಅಕ್ಷರಗಳನ್ನು ಗುಂಡಾಗಿ ಬರೆಯಿಸಿ.

ಅಂ	ಅಂ	ಅಂ	ಅಂ	ಅಂ
ಅಂ				
ಅಃ	ಅಃ	ಅಃ	ಅಃ	ಅಃ
ಅಃ				

ಔ	ಔ	ಔ	ಔ	ಔ
ಔ				
ಙ	ಙ	ಙ	ಙ	ಙ
ಙ				

ಇ) ಈ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಅಂಕ ಅಂಗ ಅಂಡ ಅಂದ ಅಂತ

ಅಂಚಲ ಅಂಗಳ ಅಂಜನ ಅಂತಃಪುರ


ಈ) ನೀಡಿರುವ ಪದಗಳನ್ನು ಗುರುತಿಸಿ ಗುಂಡಾಗಿ ಬರೆಯಲು ಹೇಳಿ.

ಅಂಕಣ ಅಂತರ ಅಂಧ ಅಂತ ಅಂಗ

ಅಂಗದ ಕಂಭ ಕಂಪನ ಮಂಗ ಕಂಠ

ಅಂ ಅಃ ಔ ಙ

ಉ) ವೃತ್ತಗಳಲ್ಲಿ ನೀಡಿರುವ ಅಕ್ಷರಗಳನ್ನು ಬಳಸಿ ಮಧ್ಯದಲ್ಲಿ 'ಂ' ಬರುವಂತೆ ಮಾದರಿಯಂತೆ ಪದಗಳನ್ನು ರಚಿಸಿ, ಮಕ್ಕಳಿಂದ ಬರೆಯಿಸಿ, ಓದಿಸಿ.



ಮಾದರಿ : ರಂಗ

೧. __________ ೨. __________

೩. __________ ೪. __________


೫. __________ ೬. __________

೭. __________ ೮ __________

೯. __________ ೧೦. __________


ಊ) ಚಿತ್ರಕ್ಕೆ ಬಣ್ಣ ತುಂಬುವಂತೆ ತಿಳಿಸಿ.

ಚಿತ್ರ ೧



ಚುಕ್ಕೆಗಳನ್ನು ಕೂಡಿಸಿ ಚಿತ್ರಕ್ಕೆ ಸೂಕ್ತ ಬಣ್ಣಗಳನ್ನು ತುಂಬಿಸಿ.

ಚಿತ್ರ ೨



ಅಕ್ಷರಾಭ್ಯಾಸ

ಮಕ್ಕಳಿಂದ ಓದಿಸಿ ನಕಲು ಮಾಡಿಸಿ

೧

ಉರಗ

ಉರಗದ ಓಟ

ಉರಗದ ಓಟ ಸರಸರ

೨

ಸರ

ನಯನಳ ಸರ

ನಯನಳ ಸರ ಪಳಪಳ

೩

ಆಟ

ಓಟದ ಆಟ

ಈಗ ಆಟದ ಸಮಯ

ಅಮರನ ಆಟ ಓಟದ ಆಟ

ಓಟದ ಆಟ ಬಹಳ ಮಜ

ಳ

ಅಜ ಗಜ

ಆ ಅಜ ಈ ಗಜ

ಅಜ ಗಜ ಮಜ

ಈಗ ಅಜ ಗಜದ ಓಟ

ಅಜ ಗಜದ ಓಟ ಬಹಳ ಮಜ

೫

ಬಸವನ ಮಗ ಅಮರ

ಗಗನ ಕಂಡ

ಈಗ ಉದಯದ ಸಮಯ

ಗಗನ ಚಂದ

ಅಮರ ಕಂಡ ಗಗನ ಚಂದ

ಅಮರನ ಮನ ಸಂತಸ

ಜಗದ ಜನ ಕಂಡ ಗಗನ ಚಂದ

ಜನರ ಮನ ಸಂತಸ

ಕಲಿತ ಅಕ್ಷರಗಳು

ಅ	ಆ	ಇ	ಈ	ಉ	ಊ	ಋ
ಎ	ಏ	ಐ	ಒ	ಓ	ಔ	
ಅಂ	ಅಃ					

ಕ	ಖ	ಗ	ಘ	ಙ
ಚ	ಛ	ಜ	ಝ	ಞ
ಟ	ಠ	ಡ	ಢ	ಣ
ತ	ಥ	ದ	ಧ	ನ
ಪ	ಫ	ಬ	ಭ	ಮ
ಯ	ರ	ಲ	ವ	ಶ
ಷ	ಸ	ಹ	ಳ	



ಕೇಳಿಸಿ – ಹೇಳಿಸಿ

(ಪಾಠ – 9 : ಪಾಠಪೂರ್ವ ಚಟುವಟಿಕೆ)


ಅ) ಚಿತ್ರ ತೋರಿಸಿ ಪದ ಹೇಳಿಸಿ.



ಆಗಸ



ಚಂದಿರ




ರವಿ



ತಾರೆ



ಮೋಡ



ಮನೆ



ದೀಪ



ನೀರಿನ ಅಲೆ

ಪದ್ಯ ಪಾಠ

ಪಾಠ ೯

ಚಂದಿರನೇತಕೆ ಓಡುವನಮ್ಮ

ಕವಿ : ನೀ.ರೇ. ಹಿರೇಮಠ



(ಈ ಪದ್ಯವನ್ನು ರಾಗವಾಗಿ ಹೇಳಿ, ಮಕ್ಕಳಿಂದ ಹೇಳಿಸಿ.)

ಚಂದಿರನೇತಕೆ ಓಡುವನಮ್ಮ
ಮೋಡಕೆ ಹೆದರಿಹನೇ

ಬೆಳ್ಳಿಯ ಮೋಡದ ಅಲೆಗಳ ಕಂಡು
ಚಂದಿರ ಬೆದರಿಹನೇ

ಹಿಂಜಿದ ಅರಳೆಯು ಗಾಳಿಗೆ ಹಾರಿ
ಮೋಡಗಳಾಗಿಹವೇ

ಅರಳೆಯು ಮುತ್ತಿ ಮೈಯನು ಸುತ್ತಿ
ಚಂದ್ರನ ಬಿಗಿಯುವವೆ?

ಮಂಜಿನ ಗಡ್ಡೆಯ ಮೋಡವು ಕರಗಲು
ಚಂದಿರ ನಗುತಿಹನು

ಕರಗಿದ ಮೋಡದ ಸೆರೆಯನು ಹರಿಯುತ
ಬಾನಲಿ ತೇಲುವನು

ಚಂದಿರನೆನ್ನಯ ಗೆಳೆಯನು ಅಮ್ಮಾ
ನನ್ನೊಡನಾಡುವನು

ನಾನೂ ಓಡಲು ತಾನೂ ಓಡುವ
ಚೆನ್ನಿಗ ಚಂದಿರನು

ಬಾ ಬಾ ಚಂದಿರ ಬೆಳ್ಳಿಯ ಚಂದಿರ
ನಮ್ಮಯ ಮನೆಗೀಗ

ನಿನ್ನಯ ಬೆಳಕನು ಎಲ್ಲೆಡೆ ಚೆಲ್ಲಿ
ಮನವನು ಬೆಳಗೀಗ.

ಓದಿ ಹೇಳಿ :

ಚಂದಿರ, ಓಡು, ಮೋಡ, ಹೆದರು, ಬೆಳ್ಳಿ, ಅಲೆ, ಕಂಡು, ಬೆದರಿಹ, ಹಿಂಜಿದ, ಅರಳೆ, ಗಾಳಿ, ಹಾರಿ, ಮುತ್ತಿ, ಮೈ, ಸುತ್ತಿ, ಬಿಗಿ, ಮಂಜಿನ, ಗಡ್ಡೆ , ಕರಗು, ನಗು, ಸೆರೆ, ಹರಿ, ಬಾನು, ತೇಲು, ಎನ್ನಯ, ಗೆಳೆಯ, ಅಮ್ಮಾ, ನನ್ನೊಡನೆ, ಆಡು, ನಾನು, ತಾನು, ಚೆನ್ನಿಗ, ಬೆಳ್ಳಿ, ನಮ್ಮ, ಮನೆ, ಬೆಳಕು, ಎಲ್ಲೆಡೆ, ಚೆಲ್ಲಿ, ಮನ, ಬೆಳಗು.

ಅಭ್ಯಾಸ

ಅ) ಪದ್ಯದ ಸಾಲುಗಳಲ್ಲಿ ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.

೧) ಬೆಳ್ಳಿಯ ಮೋಡದ ________ ಕಂಡು
ಚಂದಿರ ಬೆದರಿಹನೇ

೨) ಅರಳೆಯು ಮುತ್ತಿ ________ ಸುತ್ತಿ
ಚಂದ್ರನ ಬಿಗಿಯುವವೆ?

೩) ಮಂಜಿನ ________ ಮೋಡವು ಕರಗಲು
ಚಂದಿರ ನಗುತಿಹನು

೪) ನಾನೂ ಓಡಲು ತಾನೂ ಓಡುವ
________ ಚಂದಿರನು

ಆ) ಪದ್ಯದ ಒಂದು ಸಾಲನ್ನು ನೀಡಿದೆ, ಮುಂದಿನ ಸಾಲನ್ನು ಮಕ್ಕಳಿಂದ ಹೇಳಿಸಿ.

ಅ) ಚಂದಿರನೇತಕೆ ಓಡುವನಮ್ಮ
____


ಆ) ಹಿಂಜಿದ ಅರಳೆಯು ಗಾಳಿಗೆ ಹಾರಿ
____





ಇ) ಕರಗಿದ ಮೋಡದ ಸೆರೆಯನು ಹರಿಯುತ
____

ಇ) ಪದ್ಯದಲ್ಲಿ ಬಳಕೆಯಾಗಿರುವ ಕೆಲವು ಪದಗಳನ್ನು ನೀಡಲಾಗಿದೆ. ಈ ಪದಗಳನ್ನು ಓದಿ, ಮಕ್ಕಳಿಂದ ಹೇಳಿಸಿ.

ಚಂದಿರ	ಮೋಡ	ಅಲೆ	ಅರಳೆ
ಗಾಳಿ	ನಗು	ಹರಿ	ಬಾನು
ಗೆಳೆಯ	ನಾನು	ಓಡು	ಮನೆ
ಬೆಳಕು	ಮನ	ಬೆಳಗು	

ಈ) ಚಿತ್ರಗಳನ್ನು ತೋರಿಸಿ ಅವು ಏನೆಂದು ಮಕ್ಕಳನ್ನು ಪ್ರಶ್ನಿಸಿ ಉತ್ತರ ಪಡೆಯಿರಿ.



ಓದಿಸಿ – ಬರೆಯಿಸಿ

ಅಕ್ಷರ ಪಾಠ

ಪಾಠ ೧೦

ಗುಣಿತಾಕ್ಷರಗಳು

(ಪಾಠಪೂರ್ವ ಅಭ್ಯಾಸ)

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಕ



ಕಮಲ

ಕಾ




ಕಾಗೆ

ಕಿ




ಕಿಟಕಿ

ಕೀ



ಕೀಟ

ಕು




ಕುರಿ

ಕೂ



ಕೂಸು

ಕೃ




ಕೃಷಿ

ಕೆ




ಕೆರೆ

ಕೇ



ಕೇಸರಿ

ಕೈ




ಕೈ

ಕೊ




ಕೊಡ

ಕೋ



ಕೋತಿ

ಕೌ




ಕೌದಿ

ಗುಣಿತಾಕ್ಷರಗಳು–೧

ತಲೆಕಟ್ಟು–ಇಳಿ–ಗುಡಿಸು–ಗುಡಿಸಿನ ದೀರ್ಘ


ಅ) ಚಿತ್ರ ತೋರಿಸಿ ಪದ ಹೇಳಿಸಿ.



ರಥ



ನಾಯಿ



ಗಿಳಿ



ದೀಪ

ಆ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

ಾ ತಲೆಕಟ್ಟು	ಕರ	ಖಗ	ಘನ	ಚಟ
	ಛಂದ	ತಡ	ರಥ	ಧನ

ಾ ಇಳಿ	ಕಾಲ	ಗಾನ	ಜಾಣ	ಚಾಚಾ
	ಡಾಬಾ	ತಾತಾ	ಪಾಯಸ	ಟಾಂಟಾಂ

ಿ ಗುಡಿಸು	ಗಿಳಿ	ಜಾಜಿ	ಇಣಚಿ	ಕಿಟಕಿ
	ಗಿರಿ	ದಿನ	ಗಾಡಿ	ಪಿರಿಪಿರಿ

ೀ ಗುಡಿಸಿನ ದೀರ್ಘ	ಗೀಗೀ	ಚೀಟಿ	ಜೀಜೀ	ಕೀಟ
	ಠೀವಿ	ತೀರ	ದೀಪ	ಪೀಪೀ

ಅಭ್ಯಾಸ

ಅ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ನರಿ	ಗಿಳಿ	ಇಲಿ	ಕಿವಿ	
ರಾಜ	ಲಾರಿ	ವಾಣಿ	ಹಾರ	ನಾಯಿ
ಮಿಠಾಯಿ	ಕಾಯಿ	ಹಾನಿ	ಕಾಳಿ	ಯಾಗ
ಬೀಗ	ರೀತಿ	ಲೀಲ	ವೀರ	ಶೀತ

ಆ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಮತ್ತು ಬರೆಯಲು ಹೇಳಿ.

ಬಾಯಿ ಬಿಳಿ ಗಿರಿ ಲಾಲಿ

ಲೀಲ ವಾಣಿ ವಿನಯ ವೀಣ

ಶಾಕ ಶಿವ ಸೀಸ ಸಾಲ

ಸಿಹಿ ಸೀತ ಹಾದಿ ಹಿಮ

ಬೀರ ಹಳಿ ಬಿಳಿ ಬೀದಿ

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಸಾವಿರ ಹಾಡಿನ ಸರದಾರ

ಕಿಟಕಿಯ ಬಳಿ ಚಿಮಣಿ ದೀಪ


ಸೀತಾ ತಂಗಿ ನೀತಾ

ನೀತಾ ಪೀಪೀ ತಾ


ಗುಣಿತಾಕ್ಷರಗಳು–೨

ಕೊಂಬು–ಕೊಂಬಿನಿಳಿ–ವಟ್ಟಸುಳಿ

ಅ) ಚಿತ್ರ ತೋರಿಸಿ, ಪದ ಹೇಳಿಸಿ.



ಹುಲಿ



ಹೂಜಿ



ಗೃಹ

ಆ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

	ಕುಸುರಿ	ಗುರು	ಚುರುಮುರಿ	ಚುಟುಕು
ು ಕೊಂಬು	ತುರುಬು	ಧುರೀಣ	ಡುಮುಕಿ	ಪುನುಗು
	ಯುವ	ರುಜು	ಲುಂಗಿ	ಹಾವು

ೂ ಕೊಂಬಿನಿಳಿ	ಕೂಸು	ಗೂಡು	ಚೂರು	ಜೂಲು
	ಕಡೂರು	ತೂತು	ದೂರು	ನೂರು
	ಪೂರಿ	ಯೂಪ	ರೂಪ	ಲೂನ

ೃ ವಟ್ರಸುಳಿ	ಕೃತಿ	ಗೃಹ	ತೃಣ	ಧೃತಿ
	ನೃಪ	ಭೃಂಗ	ಮೃಡ	ವೃಥಾ
	ಶೃಂಗ	ಸೃಜನ	ಹೃದಯ	ಘೃತ

ಅಭ್ಯಾಸ

ಅ) **ನೀಡಿರುವ ಪದಗಳನ್ನು ಗುರುತಿಸಿ, ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.**

ಕುರಿ, ಗುರಿ, ಚುರುಕು, ಕುಟುಕು, ಡುರುಕಿ, ತುರುಸು, ನುಣುಪು, ಬುಗುರಿ, ಮುನಿ, ರುಜು, ಹುಳಿ, ಸುಗುಣ, ಭುವನ, ಋಷಿ .

ಆ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹಾಗೂ ಬರೆಯಲು ಹೇಳಿ.

ಕೂಪ ಗೂಡು ಚೂಪು ಜೂಲಿ

ತೂರು ದೂರ ನೂರು ಪೂರಿ

ಮೂರುತಿ ರೂಮು ಲೂನ ಶೂರ

ಹೂಡು ಧೂಪ ಭೂಮ ಖೂಳ

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಇಲಿಯ ಕಿವಿ ಕಿರಿದು.

ಬುಗುರಿ ಗಿರಿಗಿರಿ ತಿರುಗಿತು.

ಹೂಜಿಯ ನೀರು ಕುಡಿಯಿರಿ.

ಘಾತಿಮಾ ಚೂಟಿ ಹುಡುಗಿ.


ಕೂಸಿನ ನಗು ಕಿಲಕಿಲ.

ನೃಪನ ಹೃದಯ ಡವಡವ.


ಗುಣಿತಾಕ್ಷರಗಳು–೩

ಎತ್ವ–ಏತ್ವ–ಐತ್ವ

ಅ) ಚಿತ್ರ ತೋರಿಸಿ ಪದ ಹೇಳಿಸಿ.



ಕೆರೆ



ಮೇಕೆ



ಸೈನಿಕ

ಅಭ್ಯಾಸ

ಅ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

ೆ ಎತ್ವ	ಕೆರೆ	ಗೆಳೆಯ	ಚೆಲುವ	ಹೆಡೆ
	ಎಡೆ	ಬೆಣೆ	ತೆನೆ	ದೆಸೆ
	ಪೆರೆ	ಮೆರೆ	ಬೆಲೆ	ಹವೆ

ೕ ಏತ್ವ (ಎತ್ವ+ದೀರ್ಘ)	ಕೇರೆ	ಗೇರು	ಚೇಳು	ಜೇಡ
	ಟೇಪು	ಡೇರೆ	ತೇರು	ದೇವಿ
	ನೇರಳೆ	ಪೇಟೆ	ಬೇಟೆ	ಮೇಕೆ

ೈ ಐತ್ವ	ಕೈ	ಗೈರು	ಚೈನು	ಜೈಲು
	ಟೈರು	ಡೈರಿ	ತೈಲ	ದೈವ
	ಮೈ	ಪೈರು	ಬೈಗು	ನೈದಿಲೆ

ಅಭ್ಯಾಸ

ಅ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಸೆಳೆ, ಸೇರು, ಸೈನಿಕ, ಹೆರಳು, ಹೇಮ, ಹೈದ, ಸೆಖೆ, ಉಘೇ, ಪೇಡೆ, ರಂಭೆ, ಐದು, ಭೈರವ, ಮೈಸೂರು, ಹೈದರ, ಲೈಲ, ವೈರಿ, ಶೈವ, ಬೈಗು.

ಆ) ನೀಡಿರುವ ಪದಗಳನ್ನು ಗುಂಡಾಗಿ ಬರೆಯಲು ಹೇಳಿ.

ಕೆನೆ	ಕೇಳು	ಕೈದು	ಗೆಳೆಯ
ಗೇಟು	ಚೇಳು	ಚೈನು	ಥೈಥಕ
ಮೈಮರೆ	ನೂರು	ಪೈಪು	ಕೈದಿ

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಕೆರೆಯ ಏರಿಯ ಮೇಲೆ ಮೇಕೆ ಇದೆ.


ಸೈನಿಕರು ದೇಶದ ಗಡಿ ಕಾಯುವರು.

ನೀರಿಗೆ ನೈದಿಲೆ ಶೃಂಗಾರ.


ಗುಣಿತಾಕ್ಷರಗಳು–೪

ಒತ್ವ–ಓತ್ವ–ಔತ್ವ


ಅ) ಚಿತ್ರ ತೋರಿಸಿ ಪದ ಹೇಳಿಸಿ.



ಕೊಡೆ



ಡೋಲು



ನೌಕೆ

ಆ) ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

ೊ ಒತ್ವ	ಕೊಡೆ	ಗೊರವ	ಚೊಗ	ಜೊತೆ
	ಟೊಮೆಟೊ	ತೊರೆ	ದೊರೆ	ನೊರೆ
	ಪೊರೆ	ಮೊರೆ	ಬೊಂಬೆ	ಹೊರೆ

ೋ ಓತ್ವ (ಒತ್ವ+ದೀರ್ಘ)	ಕೋರೆ	ಗೋಡೆ	ಚೋಟು	ಜೋಗುಳ
	ಟೋಪಿ	ತೋಟ	ದೋರೆ	ನೋಟು
	ಪೋರ	ಬೋರ	ಮೋಡ	ರೋಟಿ

ೌ ಔತ್ವ	ಕೌರವ	ಗೌರವ	ಚೌಚೌ	ಜೌಗು
	ಡೌಲು	ತೌರು	ದೌಡು	ಪೌರ
	ಬೌಬೌ	ಮೌನ	ಯೌವನ	ಸೌಟು

ಅಭ್ಯಾಸ

ಅ) ನೀಡಿರುವ ಪದಗಳನ್ನು ಬರೆಯಲು ತಿಳಿಸಿ.

ಕೊಳೆ ಕೋಳಿ ಕೌತುಕ ಗೊರಗ

______ ______ ______ ______

______ ______ ______ ______

ಗೋವು	ಗೌರಿ	ಚೋಳ	ಚೌಲ
ಜೋಗುಳ	ಜೌಗು	ಡೋಲು	ತೊಲೆ
ತೋರ	ತೌಳವ	ದೊಣೆ	ದೋಣಿ
ನೋಣ	ನೋಟ	ನೌಕೆ	ಪೊಸತು
ಪೋರ	ಪೌಳಿ	ಯೋಜನ	ಯೌವನ
ಲೋಕ	ಶೋಕಿ	ಶೌರಿ	ಸೊಗಸು
ಸೋರೆ	ಸೌತೆ	ಹೊಸ	ಹೋತ

ಆ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.


ಹುಡುಗರು ಟೋಪಿಯ ಆಟ ಆಡಿದರು.

ಮಳೆ ಮಳೆ ಮಳೆ, ಕೊಡೆ ಹಿಡಿದು ನಡೆ.

ಟೊಮಾಟೊ ಸಾರು ಬಲು ರುಚಿ.

ಡಮಡಮ ಡೋಲು, ಬಡಿದು ಕುಣಿದ ಬಾಲು.

ಇ) ಚಿತ್ರಕ್ಕೆ ಬಣ್ಣ ತುಂಬಲು ತಿಳಿಸಿ.




ಕಲಿತ ಗುಣಿತಾಕ್ಷರಗಳು

ಹೆಸರು	ಉದಾಹರಣೆ	ಅಕ್ಷರ	ಪದ
ತಲೆಕಟ್ಟು	ಕ ಕ್ಕೆ ತಲೆಕಟ್ಟು	ಕ	ಕರ
ಇಳಿ	ಕ ಕ್ಕೆ ಇಳಿ	ಕಾ	ಕಾಗೆ
ಗುಡಿಸು	ಕ ಕ್ಕೆ ಗುಡಿಸು	ಕಿ	ಕಿಟಕಿ
ಗುಡಿಸಿನ ದೀರ್ಘ	ಕ ಕ್ಕೆ ಗುಡಿಸಿನ ದೀರ್ಘ	ಕೀ	ಕೀಟ
ಕೊಂಬು	ಕ ಕ್ಕೆ ಕೊಂಬು	ಕು	ಕುರಿ
ಕೊಂಬಿನ ಇಳಿ	ಕ ಕ್ಕೆ ಕೊಂಬಿನಿಳಿ	ಕೂ	ಕೂಸು
ವಟ್ಟ ಋಸುಳಿ	ಕ ಕ್ಕೆ ವಟ್ಟ ಸುಳಿ	ಕೃ	ಕೃಪ
ಎತ್ವ	ಕ ಕ್ಕೆ ಎತ್ವ	ಕೆ	ಕೆರೆ
ಏತ್ವ (ಎತ್ವನ ದೀರ್ಘ)	ಕ ಕ್ಕೆ ಎತ್ವನ ದೀರ್ಘ	ಕೇ	ಕೇರೆ
ಐತ್ವ	ಕ ಕ್ಕೆ ಐತ್ವ	ಕೈ	ಕೈ
ಒತ್ವ	ಕ ಕ್ಕೆ ಒತ್ವ	ಕೊ	ಕೊಡೆ
ಓತ್ವ (ಒತ್ವನ ದೀರ್ಘ)	ಕ ಕ್ಕೆ ಓತ್ವನ ದೀರ್ಘ	ಕೋ	ಕೋಳಿ
ಔತ್ವ	ಕ ಕ್ಕೆ ಔತ್ವ	ಕೌ	ಕೌದಿ
ಅನುಸ್ವಾರ	ಕ ಕ್ಕೆ ಅನುಸ್ವಾರ	ಕಂ	ಕಂಸ
ವಿಸರ್ಗ	ಕ ಕ್ಕೆ ವಿಸರ್ಗ	ಕಃ	ಕಃ

ಅಭ್ಯಾಸ

ಅ) ಚಿತ್ರ ತೋರಿಸಿ, ಪದ ಹೇಳಿಸಿ, ಬರೆಯಿಸಿ.



ಆಕಳು

____


____



ಇಣಚಿ

____

____



ಉಂಗುರ

____


____



ಅರಸ

____


____



ಎಲೆ

____

____



ಮರ

____


____



ಇಲಿ

____

____



ನೇಗಿಲು

____

____




ತೆನೆ

____

____




ತಬಲ




ಮೇಜು



ನವಿಲು




ಭಟ




ಕುದುರೆ



ತಮಟೆ




ಶಂಖ




ಹಾವು




ರೈತ




ಕೋತಿ




ನೌಕೆ




ನೊಣ



ಗೋಡೆ



ಚೇಳು




ಕೆರೆ



ಸೈನಿಕ



ಸೌಟು





ಕೋಳಿ

(ಪಾಠ – ೧೧ : ಪಾಠಪೂರ್ವ ಚಟುವಟಿಕೆ)

ಅ) ಈ ದಿನಾಂಕಗಳ ವಿಶೇಷವನ್ನು ಓದಿ ತಿಳಿಸಿ.

ಜನವರಿ ೧೨		ಸ್ವಾಮಿ ವಿವೇಕಾನಂದರ ಜನುಮದಿನ
ಜನವರಿ ೨೬		ಭಾರತದ ಗಣರಾಜ್ಯೋತ್ಸವ
ಏಪ್ರಿಲ್ ೧೪		ಬಾಬಾ ಸಾಹೇಬ ಅಂಬೇಡ್ಕರ್ ಜನುಮದಿನ
ಆಗಸ್ಟ್ ೧೫		ಭಾರತದ ಸ್ವಾತಂತ್ರ್ಯೋತ್ಸವ

ಸಪ್ಟೆಂಬರ್ ೫		ಡಾ॥ ಎಸ್. ರಾಧಾಕೃಷ್ಣನ್‌ರ ಜನುಮದಿನ (ಶಿಕ್ಷಕರ ದಿನಾಚರಣೆ)
ಅಕ್ಟೋಬರ್ ೨		ಮಹಾತ್ಮಾ ಗಾಂಧಿ ಜನುಮದಿನ
ನವೆಂಬರ್ ೧		ಕನ್ನಡ ರಾಜ್ಯೋತ್ಸವ
ನವೆಂಬರ್ ೧೪		ಜವಾಹರಲಾಲ್ ನೆಹರು ಜನುಮದಿನ (ಮಕ್ಕಳ ದಿನಾಚರಣೆ)
ಡಿಸೆಂಬರ್ ೨೫		ಯೇಸು ಕ್ರಿಸ್ತರ ಜನುಮದಿನ (ಕ್ರಿಸ್‌ಮಸ್ ದಿನ)


gadya pāṭha

ಗದ್ಯ ಪಾಠ

ಪಾಠ ೧೧

ನೆಹರು ಜನುಮ ದಿನ

(ಈ ಪಾಠವನ್ನು ಓದಿ ಹೇಳಿ, ಓದಿಸಿ.)



ಅದು ಒಂದು ಸರಕಾರಿ ಶಾಲೆ. ಆ ದಿನ ನೆಹರು ಅವರ ಜನುಮದಿನದ ಆಚರಣೆ. ಶಾಲೆಯು ತುಂಬ ಆ ದಿನ ಸಡಗರವೋ ಸಡಗರ. ರಹೀಮನು ಹೂವು ತಂದನು. ರಾಜನು ಮಾಲೆ ಮಾಡಿದನು. ನೆಹರು ಅವರ ಪಟವು ಹೂಮಾಲೆಯಿಂದ ಕಂಗೊಳಿಸಿತು. ಶಾಂತಾರಾಮನು ದೇವರನಾಮ ಹಾಡಿದನು. ನಾರಾಯಣ ಗುರುಗಳು ದೀಪ ಬೆಳಗಿದರು.

ರೂಪ, ದೀಪ, ಫಾತಿಮಾ, ನಿಸಾರ್ ಹಾಗೂ ಸೀತಾ ಆ ದಿನದ ಆಚರಣೆ ಕುರಿತು ಭಾಷಣ ಮಾಡಿದರು. ಸಹನಾ ಕಥೆ ಹೇಳಿದಳು. ರಜನಿ ತಾನೇ ಬರೆದ ಕವಿತೆ ಓದಿದಳು.

ಗುರುಗಳಾದ ನಾರಾಯಣ ಅವರು "ನೆಹರು ಅವರು ಭಾರತದ ಕೀರುತಿ ಪುರುಷರು. ಬಡವರ ಬಂಧು. ದೇಶದ ಬೆಳವಣಿಗೆಯ ನೇತಾರರು, ಪುಟಾಣಿಗಳ ಮಮತೆಯ 'ಚಾಚಾ'. ಅವರಿಗೆ ಗುಲಾಬಿ ಹೂ ಎಂದರೆ ತುಂಬಾ ಸೊಗಸು" ಎಂದು ಪಂಡಿತ್ ಜವಾಹರಲಾಲ್ ನೆಹರೂ ಅವರ ಗುಣಗಾನ ಮಾಡಿದರು.

ಪೀಟರ್ ವಂದಿಸಿದನು. ಮಾನಸ ಸಿಹಿ ತಿಂಡಿ ಹಂಚಿದಳು. ಹೀಗೆ ನೆಹರೂ ಜನುಮ ದಿನದ ಆಚರಣೆ ಬಲು ಸೊಗಸಾಗಿ ನಡೆಯಿತು. ಭಾಗವಹಿಸಿದವರು ಸಂತಸದಿಂದ ಅವರವರ ಮನೆಗೆ ಮರಳಿದರು.

ಓದಿದ ಪದಗಳು :

ಸರಕಾರಿ, ಜನುಮ, ಆಚರಣೆ, ಸಡಗರ, ಹೂವು, ಮಾಲೆ, ಪಟ, ತಿಂಡಿ, ಭಾಷಣ, ಗುರುಗಳು, ಭಾರತ, ಪುರುಷ, ಬಡವ, ಬಂಧು, ದೇಶ, ಬೆಳವಣಿಗೆ, ನೇತಾರ, ಪುಟಾಣಿ, ಮಮತೆ, ಸೊಗಸು, ಗುಣಗಾನ, ಹಾಡು, ಕತೆ, ಕವಿತೆ, ಓದು, ಸಮಾರಂಭ, ಬಲು, ಭಾಗವಹಿಸು, ಹಂಚು, ಮರಳು.

ಅಭ್ಯಾಸ

ಅ) ವಾಕ್ಯಗಳನ್ನು ಗುಂಡಾಗಿ ನಕಲು ಮಾಡಿಸಿ.

೧. ಅದು ಒಂದು ಸರಕಾರಿ ಶಾಲೆ.

___

೨. ರಹೀಮನು ಹೂವು ತಂದನು.

___

೩. ಸಹನಾ ಕಥೆ ಹೇಳಿದಳು.

___

೪. ಮಾನಸ ಸಿಹಿ ಹಂಚಿದಳು.

___

ಆ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರ ಕೇಳಿ ತಿಳಿಯಿರಿ ಮತ್ತು ಉತ್ತರ ಬರೆಯಿಸಿ.

೧. ಪಾಠಶಾಲೆಯಲ್ಲಿ ಯಾರ ಜನುಮ ದಿನದ ಆಚರಣೆ ನಡೆಯಿತು ?

____

____

____

____

೨. ರಾಜನು ಏನು ಮಾಡಿದನು ?

____

____

____

____

೩. ನಾರಾಯಣ ಗುರುಗಳು ಏನನ್ನು ಬೆಳಗಿದರು ?

____

____

____

____

೪. ಪೀಟರ್ ಏನು ಮಾಡಿದನು?

____

____

____

____

೫. ಸಿಹಿ ತಿಂಡಿ ಯಾರು ಹಂಚಿದರು ?

____

____

____

____

ಇ) ಬಿಟ್ಟಿರುವ ಪದಗಳನ್ನು ಗುರುತಿಸಲು ತಿಳಿಸಿ, ಖಾಲಿ ಜಾಗದಲ್ಲಿ ಬರೆಯಿಸಿ.

೧) ಅದು ಒಂದು ______________ ಪಾಠಶಾಲೆ.

೨) ಶಾಲೆಯ ತುಂಬ ಆ ದಿನ ______________ ಸಡಗರ.

೩) ನೆಹರು ಅವರು ಭಾರತದ ______________ ಪುರುಷರು.

೪) ಪುಟಾಣಿಗಳ ಮಮತೆಯ ______________

೫) ಮಾನಸ ______________ ಹಂಚಿದಳು.

ಈ) ಮಾದರಿಯಂತೆ ಮಕ್ಕಳಿಂದ ಬರೆಯಿಸಿ.

ಗುರುಗಳು ರೂಪ ದೀಪ ನಿಸಾರ್	ಭಾಷಣ	ಮಾಡಿದನು. ಮಾಡಿದಳು. ಮಾಡಿದರು.



ಮಾದರಿ : ಗುರುಗಳು ಭಾಷಣ ಮಾಡಿದರು.

೧. ______________________________

೨. ______________________________

೩. ______________________________

ಉ) ಚಿತ್ರ ತೋರಿಸಿ, ಪದ ಹೇಳಿಸಿ, ದಿನಾಂಕ ತಿಳಿಸಿ, ಬರೆಯಿಸಿ.





	ಬಸವ ಜಯಂತಿ	ದಿನಾಂಕ :
	ಕನಕ ಜಯಂತಿ	ದಿನಾಂಕ :
	ಮಹಾವೀರ ಜಯಂತಿ	ದಿನಾಂಕ :
	ಮೊಹಮ್ಮದ್ ಪೈಗಂಬರ್ ಜಯಂತಿ	ದಿನಾಂಕ :
	ವಾಲ್ಮೀಕಿ ಜಯಂತಿ	ದಿನಾಂಕ :
	ಬುದ್ಧ ಜಯಂತಿ	ದಿನಾಂಕ :

(ಪಾಠ – ೧೨ : ಪಾಠಪೂರ್ವ ಚಟುವಟಿಕೆ)

ಅ) ಈ ಸಾಕು ಪ್ರಾಣಿಗಳ ಹೆಸರನ್ನು ಓದಿ ತಿಳಿಸಿ.

ಮೊಲ	ಹಸು	ಕುದುರೆ	ಪಾರಿವಾಳ	ಕೋಣ	ಗಿಳಿ
ಕೋಳಿ	ಕುರಿ	ನಾಯಿ	ಹುಂಜ	ಟಗರು	ಮೇಕೆ


ಆ) ಮೇಲೆ ಓದಿದ ಪ್ರಾಣಿ ಮತ್ತು ಪಕ್ಷಿಗಳ ಹೆಸರನ್ನು ಆಯಾ ಚಿತ್ರದ ಕೆಳಗೆ ಬರೆಯಿಸಿ.

 ____________	 ____________	 ____________
 ____________	 ____________	 ____________
 ____________	 ____________	 ____________
 ____________	 ____________	 ____________

ಗದ್ಯ ಪಾಠ

ಪಾಠ ೧೨

ಸೋಮನ ಟಾಮಿ



(ಈ ಪಾಠವನ್ನು ಓದಿ ಹೇಳಿ, ಓದಿಸಿ)

ಸೋಮನ ಮಮತೆಯ ನಾಯಿ ಟಾಮಿ. ಅದು ಮನೆಯ ಬಾಗಿಲ ಬಳಿಗೆ ಬಂದಿತು. ಆಚೆ ಈಚೆ ನೋಡಿತು. ತೆರೆದ ಬಾಗಿಲ ಮನೆಯ ಒಳಗೆ ದೋಸೆ ನೋಡಿತು. ಅದರ ಬಾಯಿಯಿಂದ ನೀರು ಸುರಿಯಿತು.

ನಾಯಿ ಕಂಡ ಸೋಮ ದೋಸೆ ತಂದನು. ದೋಸೆ ಕಂಡ ನಾಯಿ ಬಾಲ ಆಚೆ ಈಚೆ ಆಡಿಸಿತು. ಅವನು ದೋಸೆ ಹಾಕಿದನು. ಟಾಮಿ ಗಬಗಬನೆ ದೋಸೆ ತಿಂದಿತು. ಸೋಮ ಅದರ ತಲೆ ಸವರಿದನು. ಅದರ ಜೊತೆ ಆಟವಾಡಿ ನಲಿದನು. ಸೋಮನ ತಂಗಿ ವನಜಳೂ ಜೊತೆಗೆ ಆಡಿ ಕುಣಿದಳು.

ಟಾಮಿಯ ಜೊತೆ ಆಡಲು ಸೋಮನಿಗೂ ವನಜಳಿಗೂ ಸಂತಸವೋ ಸಂತಸ. ಟಾಮಿಯೂ ಕೂಡ ಅವರ ಹಿಂದೆಮುಂದೆ ತಿರುಗಿ ತಿರುಗಿ ಕುಣಿಯಿತು. ಓಡಿ ಆಡಿ ನಲಿಯಿತು. ಆಟವಾದ ಬಳಿಕ ಟಾಮಿ ಮನೆಯ ಕಾಯತೊಡಗಿತು.

ಓದಿಸಿ :

ಮಮತೆ, ಮನೆ, ಬಾಗಿಲು, ಆಚೆ, ಈಚೆ, ತೆರೆದ, ಒಳಗೆ, ದೋಸೆ, ಸುರಿ, ಕಂಡು, ಆಡಿಸು, ಗಬಗಬನೆ, ಸೋಮು, ಅದರ, ಸವರು, ಜೊತೆ, ಆಟವಾಡು, ನಲಿ, ತಂಗಿ, ಕುಣಿ, ಹಿಂದೆ, ಮುಂದೆ, ತಿರುಗಿ, ಬಳಿಕ,

ಅಭ್ಯಾಸ

ಅ) ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಪದಗಳನ್ನು ಖಾಲಿ ಜಾಗದಲ್ಲಿ ಬರೆಯಿಸಿ.

೧) ಟಾಮಿ ಮನೆಯ ಬಾಗಿಲ ಬಳಿಗೆ ಬಂದಿತು. ____ ____ ನೋಡಿತು.

೨) ಸೋಮ ಅದರ ________ ಸವರಿದನು.

೩) ಆಟವಾದ ಬಳಿಕ ಟಾಮಿ ಮನೆಯ __________

ಆ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರಗಳನ್ನು ಕೇಳಿ ತಿಳಿಯಿರಿ ಮತ್ತು ಉತ್ತರ ಬರೆಯಿಸಿ.

೧) ಸೋಮನ ಮಮತೆಯ ನಾಯಿಯ ಹೆಸರೇನು?

____

____

೨) ದೋಸೆ ನೋಡಿದಾಗ ನಾಯಿಯ ಬಾಯಿಯಿಂದ ಏನು ಸುರಿಯಿತು?

____

____

೩) ನಾಯಿ ಕಂಡ ಸೋಮ ಏನನ್ನು ತಂದನು ?

____

____

೪) ಸೋಮನ ತಂಗಿಯ ಹೆಸರೇನು ?

____

____

ಇ) ಕೊಟ್ಟಿರುವ ಪ್ರಾಸ ಪದಗಳನ್ನು ಓದಿಸಿ ಮತ್ತು ಬರೆಯಿಸಿ.

೧) ಬಂದಿತು – ನೋಡಿತು

_________ – _________

_________ – _________

೨) ಸುರಿಯಿತು – ಆಡಿಸಿತು

_________ – _________

_________ – _________

೩) ತಿಂದಿತು – ತೊಡಗಿತು

_________ – _________

_________ – _________

೪) ನಲಿಯಿತು – ಕುಣಿಯಿತು

_________ – _________

_________ – _________

ಈ) ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯಗಳನ್ನು ಪೂರ್ಣಗೊಳಿಸಲು ತಿಳಿಸಿ.

೧) ಸೋಮನ ಮಮತೆಯ ನಾಯಿಯ ಹೆಸರು__________

೧) ರಾಮಿ ೨) ರೂಬಿ ೩) ಟಾಮಿ

೨) ನಾಯಿ ಕಂಡ ಸೋಮ _________ ತಂದನು.

೧) ಕಡುಬು ೨) ದೋಸೆ ೩) ಚಪಾತಿ

೩) ಟಾಮಿ __________ ದೋಸೆ ತಿಂದಿತು.

೧) ಗಬಗಬನೆ ೨) ಚಟಚಟನೆ ೩) ಕಚಕಚನೆ

ಅಕ್ಷರ ಪಾಠ



ಪಾಠ ೧೩

ಸಜಾತೀಯ ಒತ್ತಕ್ಷರಗಳು

(ಪಾಠಪೂರ್ವ ಅಭ್ಯಾಸ)

ಒತ್ತಕ್ಷರಗಳು

ಚಿತ್ರ ತೋರಿಸಿ ಪದ ಹೇಳಿಸಿ.

 ಹಕ್ಕಿ	 ಮಗ್ಗ	 ಹಚ್ಚೆ
 ಅಜ್ಜ	 ಬೊಟ್ಟು	 ಗಡ್ಡ
 ಕತ್ತೆ	 ಹದ್ದು	 ಕನ್ನಡಿ
 ಕಪ್ಪೆ	 ಕಬ್ಬು	 ಕಮ್ಮಾರ

ಒತ್ತಕ್ಷರಗಳು–೧

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ಜ್ಜ ಟ್ಟ ಣ್ಣ ಬ್ಬ

ಆ) ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅಜ್ಜ ಅಟ್ಟ ಅಣ್ಣ ಹಬ್ಬ

ಮಜ್ಜನ ಪಟ್ಟಣ ಸಣ್ಣಾಟ ಕಬ್ಬಿಣ

ಒತ್ತಕ್ಷರಗಳು–೨

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ಕ್ಕ ಗ್ಗ ಚ್ಚ ಡ್ಡ ದ್ದ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅಕ್ಕ ಮಗ್ಗ ಉಚ್ಚ ಗಡ್ಡ ಉದ್ದ

ಗುಗ್ಗರಿ ಹಚ್ಚಡ ಗಿಡ್ಡರು ಗದ್ದಲ

ಒತ್ತಕ್ಷರಗಳು–೩

ಅ) ಈ ಒತ್ತಕ್ಷರಗಳ ನಕಲು ಮಾಡಿಸಿ.

ವ್ವ ಪ್ಪ ಸ್ಸ ಳ್ಳ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅವ್ವ ಅಪ್ಪ ಬಸ್ಸು ಹಳ್ಳ

ಸುವ್ವಾಲಿ ಬೆಳ್ಳುಳ್ಳಿ ತಪಸ್ಸು

ಒತ್ತಕ್ಷರಗಳು–೪

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ತ್ತ ನ್ನ ಮ್ಮ ಯ್ಯ ಲ್ಲ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಬೆತ್ತ ಅನ್ನ ತಮ್ಮ ಅಯ್ಯ ಬೆಲ್ಲ

ಕತ್ತರಿ ಕನ್ನಡ ಹೆಮ್ಮರ ಉಯ್ಯಾಲೆ ಮಲ್ಲಿಗೆ

ಒತ್ತಕ್ಷರಗಳು–೫

ವಿಜಾತೀಯ ಒತ್ತಕ್ಷರಗಳು

ಅ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಕುಬ್ಜ ಇಷ್ಟ ಕಷ್ಟ ನಷ್ಟ

ಉತ್ಖನನ ವಿಜ್ಞಾನ ಸತ್ಕಾರ ಮುಷ್ಕರ

ಸತ್ಕವಿ ಖಡ್ಗ ಶಬ್ಧ ಸ್ವಚ್ಛ

ಉದ್ಗಾರ ನಿಶ್ಚಯ ನಿಶ್ಚಲ ನಿಶ್ಚಿತ

ಆಸ್ತಿ	ಶಕ್ತಿ	ಜಾಸ್ತಿ	ಪುಸ್ತಕ
ಮಸ್ತಕ	ಹಸ್ತ	ಕುಸ್ತಿ	ಉಚ್ಚಾರ
ಸನ್ಮಾನ	ವಾಗ್ಮಿ	ವಿಖ್ಯಾತ	ಯೋಗ್ಯ
ದ್ರವ	ಶ್ರವಣ	ಕ್ರಮ	ಪ್ರೀತಿ
ಪ್ರತಿಭೆ	ಸ್ವಲ್ಪ	ಸತ್ಯ	ಸ್ಥಳ

ನಾಲ್ಕು ನಮಸ್ಕಾರ ಧ್ರುವ ನಿತ್ಯ

ವ್ಯಾಯಾಮ ಬ್ಯಾಡ ಆರೋಗ್ಯ ಉದ್ಯಾನ




ಎಷ್ಟು ದೃಷ್ಟಿ ವಜ್ರ ದ್ರಾಕ್ಷಿ

ಈ ಹೂವಿಗೆ ಮಕ್ಕಳಿಂದ ಸರಿಯಾದ ಬಣ್ಣ ತುಂಬಿಸಿ.









ಒತ್ತಕ್ಷರಗಳು– ಅಭ್ಯಾಸ

ಅ) ಚಿತ್ರ ತೋರಿಸಿ ಪದ ಬರೆಯಿಸಿ.

ಅ	ಆ	ಇ
	________	ಕತ್ತರಿ
	________	ಸೊಳ್ಳೆ
	________	ಹಲ್ಲು
	________	ಲಡ್ಡು
	________	ಬಸ್ಸು

ಆ) ಚಿತ್ರಕ್ಕೆ ಸರಿಹೊಂದುವ ಪದವನ್ನು ಬರೆಯಿಸಿ.

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

೧. ಅಜ್ಜಿಗೆ ಮಜ್ಜಿಗೆ ಅಚ್ಚುಮೆಚ್ಚು.

೨. ಗಿಡ್ಡಪ್ಪ ತಕ್ಕಡಿಯಲ್ಲಿ ಬೆಳ್ಳುಳ್ಳಿ ತೂಗಿದ.

೩. ಅಕ್ಕಪಕ್ಕದ ರಸ್ತೆಯ ಚಿಕ್ಕಮಕ್ಕಳು ಹಗ್ಗಜಗ್ಗಾಟ ಆಡಿದರು.


೪ ಪುಟ್ಟಿ ಪುಟ್ಟ ಹಬ್ಬಕ್ಕಾಗಿ ಬಣ್ಣದ ಬಟ್ಟೆ ತೊಟ್ಟರು.


೫. ಅಪ್ಪ ಅಮ್ಮ ಗದ್ದೆಗೆ ಹೋದರು.

೬. ಅತ್ತೆ ಹಲ್ಲಲ್ಲಿ ಬೆಲ್ಲ ಕಚ್ಚಿದರು.


(ಪಾಠ – ೧೪ : ಪಾಠಪೂರ್ವ ಚಟುವಟಿಕೆ)


ಅ) ಚಿತ್ರದಲ್ಲಿರುವ ಹಣ್ಣುಗಳ ಹೆಸರನ್ನು ಬರೆದು, ಸೂಕ್ತ ಬಣ್ಣ ತುಂಬಿಸಲು ಹೇಳಿ.



____


____


____


____


____


____

ಆ) ಈ ನೋಟುಗಳ ಮುಖ ಬೆಲೆಯನ್ನು ಅಕ್ಷರಗಳಲ್ಲಿ ಬರೆಯಲು ಹೇಳಿ.

ರೂ ೧೦೦/–



. . . .

ರೂ ೫೦/–



. . . .

ರೂ ೨೦/–



. . . .

ರೂ ೧೦/–



. . . .

ರೂ ೫/–




. . . .

ಗದ್ಯ ಪಾಠ

ಪಾಠ ೧೪

ಅಬ್ಬಾಸ್ ಹಣ್ಣಿನ ಅಂಗಡಿ



(ಶಂಕರಣ್ಣ ತಮ್ಮ ಮಗ ರವಿಯೊಂದಿಗೆ ಅಬ್ಬಾಸರ ಹಣ್ಣಿನ ಅಂಗಡಿಗೆ ಬರುತ್ತಾರೆ.)

ಶಂಕರಣ್ಣ – ನಮಸ್ಕಾರ ಅಬ್ಬಾಸ್ ಅಣ್ಣ

ರವಿ – ನಮಸ್ತೆ, ಅಬ್ಬಾಸ್ ಅಂಕಲ್

ಅಬ್ಬಾಸ್ – ನಮಸ್ಕಾರ ಶಂಕರಣ್ಣ ಬನ್ನಿ, ಬಾ ರವಿ, ಏನು ಬೇಕು?

ಶಂಕರಣ್ಣ – ನಮಗೆ ಪರಂಗಿಹಣ್ಣು ಬೇಕು

ಅಬ್ಬಾಸ್ – ಪರಂಗಿ ಒಂದಕ್ಕೆ ಐದು ರೂಪಾಯಿ. ನಿಮಗೆ ಎಷ್ಟು ಪರಂಗಿ ಹಣ್ಣುಗಳು ಬೇಕು?

ಶಂಕರಣ್ಣ – ಒಂದು ಪರಂಗಿಹಣ್ಣು ಸಾಕು. ಈ ಮೂಸಂಬಿ ಹಣ್ಣಿನ ಬೆಲೆ ಎಷ್ಟು?

ಅಬ್ಬಾಸ್ – ಮೂಸಂಬಿ ಒಂದಕ್ಕೆ ಐದು ರೂಪಾಯಿಗಳು.

ಶಂಕರಣ್ಣ – ಚೆನ್ನಾಗಿರುವ ಮೂರು ಮೂಸಂಬಿ ಹಣ್ಣುಗಳನ್ನು ಕೊಡಿ. ನಿಮ್ಮಲ್ಲಿ ಸೀಬೆಹಣ್ಣು ಇವೆಯೇ? ಬೆಲೆ ಎಷ್ಟು?

ಅಬ್ಬಾಸ್ – ನೋಡಿ ಇಲ್ಲಿವೆ. ಸೀಬೆಹಣ್ಣು ಒಂದಕ್ಕೆ ಮೂರು ರೂಪಾಯಿ ಮಾತ್ರ. ಎಷ್ಟು ಹಣ್ಣುಗಳನ್ನು ಕೊಡಲಿ?

ರವಿ – ಎರಡು ಸೀಬೆಹಣ್ಣು ಸಾಕು ಅಲ್ಲವೆ, ಅಪ್ಪಾ ?

ಶಂಕರಣ್ಣ – ಎರಡು ಸೀಬೆ ಹಣ್ಣು ಕೊಡಿ, ಇವು ಇಷ್ಟೇ ಸಾಕು. ಒಟ್ಟು ಎಷ್ಟು ರೂಪಾಯಿ ಆಯಿತು?

ಅಬ್ಬಾಸ್ – ಎಲ್ಲ ಸೇರಿ ಇಪ್ಪತ್ತಾರು ರೂಪಾಯಿ ಶಂಕರಣ್ಣ.

ಶಂಕರಣ್ಣ – ಇಗೋ, ಹಣವನ್ನು ತೆಗೆದುಕೊಳ್ಳಿ, ಆ ಹಣ್ಣುಗಳನ್ನು ಈ ಬಟ್ಟೆಯ ಚೀಲದಲ್ಲಿ ಹಾಕಿಬಿಡಿ.

ಅಬ್ಬಾಸ್ – ಸರಿ, ಇಲ್ಲಿ ನೋಡಿ ನೀವು ಕೇಳಿದ ಎಲ್ಲ ಹಣ್ಣುಗಳನ್ನೂ ಹಾಕಿದ್ದೇನೆ. ಹಣ್ಣುಗಳು ಬೇಕಾದಾಗ ಬರುತ್ತಿರಿ ಶಂಕರಣ್ಣ

ಶಂಕರಣ್ಣ – ಹಾಗೆಯೇ ಆಗಲಿ ಅಬ್ಬಾಸ್ ಅಣ್ಣ, ಬರುತ್ತೇವೆ.

(ಶಂಕರಣ್ಣ ತಮ್ಮ ಮಗ ರವಿಯೊಂದಿಗೆ ಮನೆಗೆ ಹೋಗುತ್ತಾರೆ)

ಓದಿಸಿ:

ನಮಸ್ಕಾರ, ಅಣ್ಣ, ಪರಂಗಿಹಣ್ಣು, ಬೆಲೆ, ಎಷ್ಟು, ಮೂಸಂಬಿ, ರೂಪಾಯಿ, ಸೀಬೆ, ಚೆನ್ನಾಗಿ, ಇಪ್ಪತ್ತಾರು.

ಅಭ್ಯಾಸ

ಅ) ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ ಅವರಿಂದ ಉತ್ತರಗಳನ್ನು ಹೇಳಿಸಿ ಮತ್ತು ಬರೆಯಿಸಿ.


೧. ಶಂಕರಣ್ಣನ ಮಗನ ಹೆಸರೇನು?

೨. ಒಂದು ಪರಂಗಿ ಹಣ್ಣಿನ ಬೆಲೆ ಎಷ್ಟು ?

೩. ಯಾವ ಹಣ್ಣಿನ ಬೆಲೆ ಮೂರು ರೂಪಾಯಿ ?

೪. ಶಂಕರಣ್ಣ ಎಂತಹ ಮೂಸಂಬಿ ಹಣ್ಣನ್ನು ಕೇಳಿದರು?

ಆ) ಕೆಲವು ಹಣ್ಣುಗಳ ಚಿತ್ರಗಳನ್ನು ನೀಡಲಾಗಿದೆ. ಮಕ್ಕಳಿಂದ ಅವುಗಳ ಹೆಸರನ್ನು ಹೇಳಿಸಿ, ಕೊಟ್ಟಿರುವ ಜಾಗದಲ್ಲಿ ಬರೆಯಿಸಿ.

ಹಣ್ಣು	ಹೆಸರು
	....
	....
	....
	....
	....
	....
	....

ಇ) ಕೊಟ್ಟಿರುವ ಅಂಕಿಗಳನ್ನು ಮಕ್ಕಳಿಂದ ಹೇಳಿಸಿ, ಅಕ್ಷರಗಳಲ್ಲಿ ಬರೆಯಿಸಿ.

೧. ________

೨. ________

೩. ________

೪. ________

೫. ________

ಈ) ಕೊಟ್ಟಿರುವ ಪದಗಳನ್ನು ಮಕ್ಕಳಿಂದ ಹೇಳಿಸಿ, ಅಂಕಿಗಳಲ್ಲಿ ಬರೆಯಿಸಿ.

ಆರು ________

ಏಳು ________

ಎಂಟು ________

ಒಂಬತ್ತು ________

ಹತ್ತು ________

ಉ) ಬಿಟ್ಟಿರುವ ಪದಗಳನ್ನು ಮಕ್ಕಳಿಂದ ಹೇಳಿಸಿ, ಬಿಟ್ಟಿರುವ ಜಾಗದಲ್ಲಿ ಬರೆಯಿಸಿ.

೧. ಪ್ರಶ್ನೆ : ನಿನಗೆ ಯಾವ ಹಣ್ಣು ಇಷ್ಟ ?

ಉತ್ತರ : ನನಗೆ ____________ ಹಣ್ಣು ಇಷ್ಟ.

೨. ಪ್ರಶ್ನೆ : ನೀನು ಯಾವ ಹಣ್ಣನ್ನು ಮರದಲ್ಲಿ ನೋಡಿರುವೆ ?

ಉತ್ತರ : ನಾನು ____________ ಹಣ್ಣನ್ನು ಮರದಲ್ಲಿ ನೋಡಿರುವೆ.

೩. **ಪ್ರಶ್ನೆ :** ನೀನು ನೋಡಿರುವ ದೊಡ್ಡ ಗಾತ್ರದ ಹಣ್ಣು ಯಾವುದು?

ಉತ್ತರ : ನಾನು ನೋಡಿರುವ ದೊಡ್ಡ ಗಾತ್ರದ ಹಣ್ಣು ______________


೪. **ಪ್ರಶ್ನೆ :** ನೀನು ನೋಡಿರುವ ಚಿಕ್ಕ ಗಾತ್ರದ ಹಣ್ಣು ಯಾವುದು?

ಉತ್ತರ : ನಾನು ನೋಡಿರುವ ಚಿಕ್ಕ ಗಾತ್ರದ ಹಣ್ಣು ______________

ಊ) ಮುಂದೆ ಕೆಲವು ಹೇಳಿಕೆಗಳನ್ನು ಅಂಕಣದಲ್ಲಿ ನೀಡಲಾಗಿದೆ. ಮಕ್ಕಳಿಂದ ಉತ್ತರಗಳನ್ನು ಹೇಳಿಸಿ, ಕೊಟ್ಟಿರುವ ಜಾಗಗಳಲ್ಲಿ ಬರೆಯಿಸಿ.

ಕ್ರಮ ಸಂಖ್ಯೆ	ವಿವರಣೆ	ನನ್ನದು	ಗೆಳೆಯನದು
೧.	ಇಷ್ಟವಾದ ಹಣ್ಣು		
೨.	ಮರದಲ್ಲಿ ನೋಡಿರುವ ಹಣ್ಣು		
೩.	ದೊಡ್ಡ ಗಾತ್ರದ ಹಣ್ಣು		
೪.	ಚಿಕ್ಕ ಗಾತ್ರದ ಹಣ್ಣು		

ಋ) ಸೂಕ್ತ ಬಣ್ಣ ತುಂಬಿಸಲು ತಿಳಿಸಿ.




ಪದ್ಯ ಪಾಠ

ಪಾಠ ೧೫

ಮೊಲದ ಮರಿ

ಕವಿ: ಕೆಮ್ತೂರು ದೊಡ್ಡಣ್ಣ ಶೆಟ್ಟಿ

ಈ ಪದ್ಯವನ್ನು ರಾಗವಾಗಿ ಹೇಳಿ, ಮಕ್ಕಳಿಂದ ಹೇಳಿಸಿ.



ಮೊಲದ ಮರಿ ಮೊಲದ ಮರಿ
ಆಡ ಬಾರೆ
ಚುಪುಕೆ ಚುಪುಕೆ ಚುಪುಕೆ ಚುಪುಕೆ
ನೆಗೆದು ಬಾರೆ

ಪೊದರಿನಿಂದ ಪೊದರ ಬಳಿಗೆ
ನಿನ್ನ ಆಟ
ಗಿಡದ ಚಿಗುರು ನಿತ್ಯ ನಿನಗೆ
ಸೊಗಸಿನೂಟ

ಗಿಡ್ಡ ಬಾಲ ದೊಡ್ಡ ಕಿವಿಯು
ನಿನಗೆ ಚಂದಾ
ಎದ್ದು ಎನ್ನ ಬಳಿಗೆ ಬಂದು
ಆಡೊ ಕಂದಾ

ಮುದ್ದು ಮುದ್ದು ಮಾತುಗಳನು
ನಿನಗೆ ಕಲಿಸುವೇ
ಮುದ್ದು ಮಾಡಿ ಪ್ರೀತಿಯಿಂದ
ನಿನ್ನ ಸಲಹುವೇ.

ಓದಿಸಿ :

ಮೊಲ, ಮರಿ, ಆಡು, ಬಾರೆ, ಚುಪುಕೆ ಚುಪುಕೆ, ನೆಗೆದು, ಬಳಿ, ಆಟ, ಗಿಡ, ಚಿಗುರು, ನಿತ್ಯ, ಸೊಗಸು, ಊಟ, ಗಿಡ್ಡ ,ಬಾಲ, ದೊಡ್ಡ, ಕಿವಿ, ಚಂದ,ಎದ್ದು, ಎನ್ನ, ಬಳಿಗೆ, ಆಡೊ, ಕಂದಾ, ಮುದ್ದು, ಮಾತು, ಕಲಿಸು, ಸಲಹು.

ಅಭ್ಯಾಸ

ಅ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರ ಕೇಳಿ ತಿಳಿಯಿರಿ ಮತ್ತು ಬರೆಯಿಸಿ.

೧. ಮೊಲದ ಮರಿ ಹೇಗೆ ನೆಗೆದು ಬರುತ್ತದೆ?

____

____

೨. ಮೊಲದ ಊಟ ಯಾವುದು?

____

____

೩. ಮೊಲದ ಬಾಲ ಹೇಗಿದೆ?

____

____

೪. ಮೊಲದ ಕಿವಿಗಳು ಹೇಗಿವೆ?

____

____

೫. ಮೊಲ ಎಲ್ಲಿ ಆಡುತ್ತದೆ?

____

____

ಆ) ಹೊಂದಿಸಿ ಹೇಳಿಸಿ, ಬರೆಯಿಸಿ.


೧. ಮುದ್ದು ಮಾತುಗಳನು – ನಿನಗೆ ಚೆಂದ __________

೨. ಮೊಲದ ಮರಿ – ನೆಗೆದು ಬಾರೆ __________

೩. ಚುಪುಕೆ ಚುಪುಕೆ – ಆಡ ಬಾರೆ __________

೪. ದೊಡ್ಡ ಕಿವಿ – ನಿನಗೆ ಕಲಿಸುವೆ __________

ಇ) ಚಿತ್ರ ತೋರಿಸಿ, ಪದ ಬರೆಯಿಸಿ.

	....
	....
	....

ಗದ್ಯ ಪಾಠ

ಪಾಠ ೧೬

ಶಂಕರಪ್ಪನ ಮನೆ



ಶಂಕರಪ್ಪನ ಮನೆ. ಸಂಜೆಯ ಸಮಯ. ಮನೆಯ ಬಾಗಿಲ ಬಳಿ ವೀಣಾ ನಿಂತಿದ್ದಳು. ಆಟವಾಡಲು ಅವಳು ಗೆಳೆಯರಿಗಾಗಿ ಕಾದಿದ್ದಳು. ಆಗ ಮಹಾದೇವ ಅವರು ಮನೆಗೆ ಬಂದರು.

ಮಹಾದೇವ ಅವರನ್ನು ನೋಡಿದ ವೀಣಾ ಸಂತಸಗೊಂಡಳು. "ಬನ್ನಿ ಚಿಕ್ಕಪ್ಪ, ಬನ್ನಿ" ಎಂದು ಮನೆಯೊಳಗೆ ಕರೆದುಕೊಂಡು ಹೋದಳು. ಕುಳಿತುಕೊಳ್ಳಲು ಹೇಳಿದಳು. ಕುಡಿಯಲು ನೀರು ತಂದು ಕೊಟ್ಟಳು. "ಚಿಕ್ಕಪ್ಪ ಚೆನ್ನಾಗಿದ್ದೀರಾ?" ಎಂದು ಪ್ರೀತಿಯಿಂದ ಮಾತನಾಡಿಸಿದಳು. "ಚಿಕ್ಕಮ್ಮ ಮತ್ತು ತಮ್ಮನ ಆರೋಗ್ಯ ಹೇಗಿದೆ ?" ಎಂದು ಕೇಳಿದಳು. ವೀಣಾಳ ಮಾತುಗಳನ್ನು ಕೇಳಿ ಚಿಕ್ಕಪ್ಪನಿಗೆ ಸಂತಸವಾಯಿತು.

ಮಹಾದೇವ ಅವರು ಅಣ್ಣ ಶಂಕರಪ್ಪನವರನ್ನು ಗೃಹಪ್ರವೇಶಕ್ಕೆ ಆಮಂತ್ರಿಸಿದರು. ಸ್ವಲ್ಪ ಹೊತ್ತು ಅಲ್ಲೇ ಇದ್ದು, ನಂತರ ತಮ್ಮ ಮನೆಗೆ ಹೊರಡಲು ಸಿದ್ಧರಾದರು.

ವೀಣಾ ಚಿಕ್ಕಪ್ಪನಿಗೆ ನಮಸ್ಕಾರ ಮಾಡಿದಳು. "ಇನ್ನೊಮ್ಮೆ ಬರುವಾಗ ಚಿಕ್ಕಮ್ಮನನ್ನೂ ತಮ್ಮನನ್ನೂ ಕರೆದುಕೊಂಡು ಬನ್ನಿ" ಎಂದು ಹೇಳಲು ಮರೆಯಲಿಲ್ಲ.

ಓದಿಸಿ :

ಸಮಯ, ಚಿಕ್ಕಪ್ಪ, ಒಳಗೆ, ಸಂತಸ, ಕುಡಿ, ನೀರು, ಪ್ರೀತಿ, ಚಿಕ್ಕಮ್ಮ, ತಮ್ಮ, ಆರೋಗ್ಯ, ಅವರು, ಹತ್ತಿರ, ಸ್ವಲ್ಪ, ಹೊತ್ತು, ಅಲ್ಲೇ, ಸಿದ್ಧರಾಗು, ನಮಸ್ಕಾರ, ಇನ್ನೊಮ್ಮೆ,ಮರೆ

ಅಭ್ಯಾಸ

ಅ) ಸರಳ ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ, ಅವರಿಂದ ಉತ್ತರಗಳನ್ನು ಬರೆಯಿಸಿ.

೧) ಯಾರನ್ನು ನೋಡಿ ವೀಣಾ ಸಂತಸಗೊಂಡಳು?

____

____

____

____

೨) ವೀಣಾ ಚಿಕ್ಕಪ್ಪನಿಗೆ ಕುಡಿಯಲು ಏನು ತಂದುಕೊಟ್ಟಳು?

____

____

____

____

೩) ಯಾರ ಮಾತನ್ನು ಕೇಳಿ ಚಿಕ್ಕಪ್ಪನಿಗೆ ಸಂತಸವಾಯಿತು ?

____

____

____

____

೪) ವೀಣಾ ಯಾರನ್ನು ಕರೆದುಕೊಂಡು ಬನ್ನಿ ಎಂದು ಹೇಳುವುದನ್ನು ಮರೆಯಲಿಲ್ಲ ?

____

____

____

____

ಆ) ನೀಡಿರುವ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು/ ಕೇಳಿದರು ಎಂದು ಮಕ್ಕಳಿಗೆ ಕೇಳಿ, ಉತ್ತರ ಪಡೆಯಿರಿ ಮತ್ತು ಬರೆಯಿಸಿ.

೧) "ಬನ್ನಿ ಚಿಕ್ಕಪ್ಪ ಬನ್ನಿ"

– ಈ ಮಾತನ್ನು ಯಾರು ಹೇಳಿದರು ?

____

____

– ಯಾರನ್ನು ಕುರಿತು ಹೇಳಿದರು ?

____

____

ಇ) ನೀಡಿರುವ ವಾಕ್ಯಗಳಲ್ಲಿ ಒಂದೊಂದು ಪದ ಬಿಡಲಾಗಿದೆ. ಆವರಣದಿಂದ ಸೂಕ್ತ ಪದವನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಲು ತಿಳಿಸಿ.


೧) ವೀಣಾ ಚಿಕ್ಕಪ್ಪನಿಗೆ ಕುಡಿಯಲು ____________ ತಂದು ಕೊಟ್ಟಳು.
(ನೀರು, ಹಾಲು, ಕಾಫಿ)

೨) ಮಹಾದೇವ ಅವರು ____________ ಶಂಕರಪ್ಪನವರನ್ನು ಗೃಹ ಪ್ರವೇಶಕ್ಕೆ ಆಹ್ವಾನಿಸಿದರು.
(ಅಣ್ಣ, ತಮ್ಮ, ದೊಡ್ಡಪ್ಪ)

ಗದ್ಯ ಪಾಠ ಪಾಠ ೧೭

ಕೈ ತೊಳೆಯಬೇಕು

(ಪಾಠವನ್ನು ಓದಿ ಹೇಳಿ, ಮಕ್ಕಳಿಂದ ಓದಿಸಿ)



ಸಂಜೆ ಆಯಿತು. ಆಶಾ ಮತ್ತು ಉದಯ ಶಾಲೆಯಿಂದ ಮನೆಗೆ ಬಂದರು. ಅಮ್ಮ ಬಾಗಿಲಲ್ಲಿ ಕಾಯುತ್ತ ನಿಂತಿದ್ದರು. ಮನೆಗೆ ಬರುತ್ತಲೆ ಉದಯನಿಗೆ ತುಂಬಾ ಹಸಿವು.

ಉದಯ : ಅಮ್ಮಾ ತಿನ್ನಲು ತಿಂಡಿ ಕೊಡು.

ಆಶಾ : ಅಮ್ಮಾ.. ಉದಯ ಕೈಕಾಲು ತೊಳೆದಿಲ್ಲ.

ಉದಯ : ನನಗೆ ಹಸಿವಾಗುತ್ತಿದೆ. ಮೊದಲು ತಿಂಡಿ ತಿನ್ನುವೆ.

ಅಮ್ಮ : ಬೇಡ, ಮೊದಲು ಕೈ ಕಾಲು ತೊಳೆ.

ಉದಯ : ಕೈ ಏಕೆ ತೊಳೆಯಬೇಕು?

ಅಮ್ಮ : ನಿನ್ನ ಕೈ ಕೊಳಕು ಆಗಿರುತ್ತದೆ. ಕೊಳಕು ಕೈಯಿಂದ ತಿಂದರೆ ಆರೋಗ್ಯ ಕೆಡುತ್ತದೆ.

ಆಶಾ : ಹೊರಗಿನ ವಸ್ತುಗಳನ್ನು ಮುಟ್ಟಿದಾಗ ಕೈಯಲ್ಲಿ ರೋಗಾಣುಗಳು ಸೇರುತ್ತವಂತೆ. ಚೆನ್ನಾಗಿ ಕೈತೊಳೆದರೆ ಕೈ ಶುಚಿಯಾಗುತ್ತದೆ.

ಅಮ್ಮ : ಹೋಗು, ಕೈ ತೊಳೆದು ಬಾ.

ಆಶಾ : ತಿಳಿಯಿತಾ ಉದಯ? ತಿನ್ನುವ ಮೊದಲು ಕೈ ತೊಳೆಯಲೇ ಬೇಕು. ಅದರಿಂದ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ.

ಉದಯ : ಸರಿ, ನಾನು ಈಗಲೇ ಕೈ ತೊಳೆಯುತ್ತೇನೆ.

ಅಮ್ಮ : ನನ್ನ ಮಕ್ಕಳು ಬುದ್ಧಿವಂತರು. ನನ್ನ ಮಕ್ಕಳು ಆರೋಗ್ಯವಂತರು.

ಆಶಾ, ಉದಯ ಕೈಕಾಲು ಮುಖ ತೊಳೆದರು. ಅಮ್ಮ ತಿಂಡಿ, ಹಾಲು ಕೊಟ್ಟರು. ಮಕ್ಕಳು ತಿಂಡಿ ತಿಂದರು. ಹಾಲು ಕುಡಿದರು.

ಓದಿಸಿ :
ಸಂಜೆ, ಆಯಿತು, ಶಾಲೆ, ಬಾಗಿಲು, ನಗುತ್ತಾ, ಹಸಿವು, ತಿನ್ನಲು, ತಿಂಡಿ, ಕೈಕಾಲು, ತೊಳೆ, ಮುಖ, ಕೊಳಕು, ರೋಗಾಣು, ಶುಚಿ, ಬುದ್ಧಿವಂತ, ಆರೋಗ್ಯವಂತ, ಹಾಲು.

ಅಭ್ಯಾಸ

ಅ) ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ ಅವರಿಂದ ಉತ್ತರಗಳನ್ನು ಬರೆಯಿಸಿ.

೧) ತಿಂಡಿ ತಿನ್ನುವ ಮೊದಲು ಏನನ್ನು ತೊಳೆದುಕೊಳ್ಳಬೇಕು?

____

____

____

____

೨) ಕೊಳಕಾದ ಕೈಯಿಂದ ತಿಂದರೆ ಏನು ಕೆಡುತ್ತದೆ?

೩) ಅಮ್ಮ ತನ್ನ ಮಕ್ಕಳಿಗೆ ಏನು ಕೊಟ್ಟಳು?

ಆ) ದೇಹದ ಕೆಲವು ಅಂಗಾಂಗಗಳ ಹೆಸರುಗಳನ್ನು ನೀಡಲಾಗಿದೆ. ಮಕ್ಕಳಿಂದ ಅವುಗಳನ್ನು ಹೇಳಿಸಿ, ಕೊಟ್ಟಿರುವ ಜಾಗಗಳಲ್ಲಿ ಬರೆಯಿಸಿ.

೧. ಕೈ

೨. ಕಾಲು

೩. ಬೆರಳು

೪. ಮೈ

೫. ತೋಳು

೬. ಮುಖ

೭. ಕಣ್ಣು

೮. ಮೂಗು ______________________________

೯. ಬಾಯಿ ______________________________

೧೦. ಹಲ್ಲು ______________________________

ಇ) ದಿನನಿತ್ಯ ತೊಳೆಯಬೇಕಾದ ಅಂಗಗಳ ಹೆಸರನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಬರೆಯಿಸಿ.

ಕೈ	ಕಾಲು	ಮೈ	ಹೃದಯ
ಬಾಯಿ	ಹಲ್ಲು	ಮೂಗು	ಶ್ವಾಸಕೋಶ
ಜಠರ	ರಕ್ತನಾಳ	ಕಣ್ಣು	ಮುಖ

ಈ) ಕೊಟ್ಟಿರುವ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿಸಲು ತಿಳಿಸಿ.

೧) ಅಮ್ಮಾ ತಿನ್ನಲು ______________ ಕೊಡು.

೨) ಮೊದಲು ______________ ತಿನ್ನುವೆ.

೩) ಕೊಳಕು ಕೈಯಿಂದ ತಿಂದರೆ ______________ ಕೆಡುತ್ತದೆ.

೪) ನನ್ನ ಮಕ್ಕಳು ______________

ಅರ್ಥಸಹಿತ ಪದಕೋಶ

ಅ

ಅಂಕ – ಗುರುತು, ಚಿಹ್ನೆ, ನಾಟಕದಲ್ಲಿ ಒಂದು ವಿಭಾಗ.

ಅಂಕಣ – ಸ್ಥಳ, ಪ್ರದೇಶ, ಮನೆಯಲ್ಲಿ ಕಂಬಗಳ ನಡುವಿನ ಪ್ರದೇಶ.

ಅಂಗ – ದೇಹದ ಒಂದು ಭಾಗ.

ಅಂಗದ – ತೋಳಿನ ಬಳೆ, ರಾಮಾಯಣದ ಒಂದು ಪಾತ್ರ.

ಅಂಗಳ – ಮನೆಗೆ ಸೇರಿರುವ ಆವರಣದ ಬಯಲು, ಅಂಗಣ.

ಅಂಚಲ – ಸೆರಗು ತುದಿ.

ಅಂಜನ – ಕಾಡಿಗೆ.

ಅಂಡ – ತತ್ತಿ, ಮೊಟ್ಟೆ.

ಅಂಡಜ – ಮೊಟ್ಟೆಯಿಂದ ಹುಟ್ಟುವ ಜೀವಿ, ಬ್ರಹ್ಮ.

ಅಂತ – ಕೊನೆ, ತುದಿ.

ಅಂತರ – ವ್ಯತ್ಯಾಸ, ಸ್ಥಳಾವಕಾಶ.

ಅಂತಃಪುರ–ರಾಣಿವಾಸ.

ಅಂಧ – ಕುರುಡ.

ಅಜ – ಬ್ರಹ್ಮ, ಗಂಡುಕುರಿ, ಟಗರು.

ಅರ – ವಸ್ತುಗಳ ಮೇಲ್ಭಾಗವನ್ನು ಹರಿತ ಮಾಡಲು ಬಳಸುವ ಸಾಧನ.

ಅರಸ – ರಾಜ, ದೊರೆ.

ಅರಳೆ – ಕಾಳು ತೆಗೆದ ಹತ್ತಿ.

ಅಲೆ – ಚಲಿಸು, ತರಂಗ.

ಅವಸರ – ಸಮಯ, ಸನ್ನಿವೇಶ, ಆತುರ.

ಆ

ಆಕಳು – ಹಸು, ದನಕರು.

ಆಗಸ – ಆಕಾಶ.

ಆನೆ – ಗಜ, ಕರಿ.

ಆರೋಗ್ಯ– ರೋಗವಿಲ್ಲದಿರುವುದು, ಸೌಖ್ಯ.

ಆಲ – ಹಾಲುಮರಗಳಲ್ಲಿ ಒಂದು.

ಆಳ – ಗಂಭೀರ.

ಇ

ಇಣಚಿ – ಅಳಿಲು.

ಇನ – ಸೂರ್ಯ.

ಈ

ಈಚಲ – ಒಂದು ರೀತಿಯ ಹುಳು, ಈಚಲಮರ.

ಉ

ಉಚ್ಚ – ಎತ್ತರ.

ಉಚ್ಚಾರ – ಹೇಳುವಿಕೆ.

ಉಡ – ಹಲ್ಲಿ ಜಾತಿಗೆ ಸೇರಿದ ದೊಡ್ಡ ಪ್ರಾಣಿ.

ಉತ್ಖನನ – ಅಗೆಯುವುದು.

ಉದಯ – ಹುಟ್ಟು..

ಉದ್ಗಾರ – ಭಾವಾವೇಶದ ಮಾತು

ಉದ್ಯಾನ – ತೋಟ.

ಉರ – ಎದೆ.

ಉರಗ – ಹಾವು.

ಊ

ಊಟ – ಆಹಾರ, ಭೋಜನ.

ಊನ – ಕುಂದು, ಕೊರತೆ

ಊರು – ನೆಲಸುವ ಸ್ಥಳ, ಹಳ್ಳಿ , ಪಟ್ಟಣ.

ಋ

ಋಣ – ಸಾಲ, ಹಂಗು.

ಋತ – ಸತ್ಯ, ನ್ಯಾಯ.

ಎ

ಎಡಬಲ – ಆಚೆ ಈಚೆ.

ಎಡೆ – ಪ್ರದೇಶ, ಜಾಗ, ನೈವೇದ್ಯ.

ಎರಕ – ಪ್ರೀತಿ, ಕಾಯಿಸಿದ ಲೋಹದ ದ್ರವವನ್ನು ಹೊಯ್ಯಲು ಬಳಸುವ ಅಚ್ಚು.

ಏ

ಏಕದಳ – ಒಂದು ದಳ ಇರುವ ಧಾನ್ಯ–ಗೋದಿ,ರಾಗಿ, ಬತ್ತ.ಇತ್ಯಾದಿ

ಏತ – ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ.

ಐ

ಐದಳ – ಐದು ದಳ.

ಒ

ಒಣ – ಸೊರಗಿದ, ಕೃಶವಾದ.

ಒಣಮರ – ಕೃಶವಾದ ಮರ.

ಓ

ಓಘ – ಪ್ರವಾಹ,ನೆರೆ,ಸಮೂಹ.

ಓಟ – ಓಡುವುದು,ಪಲಾಯನ.

ಓಲಗ – ರಾಜನ ಸಭೆ,ನಾಗಸ್ವರ.

ಔ

ಔಡಲ – ಹರಳು.

ಔರಸ – ಸ್ವಂತ ಮಗ.

ಕ

ಕಂಡ – ತುಂಡು,ತುಣುಕು.

ಕಂಪನ – ನಡುಕ.

ಕಂಭ – ಮಾಡಿನ ಆಧಾರಕ್ಕೆ ನಿಲ್ಲಿಸುವ ಮರ ಅಥವಾ ಕಲ್ಲಿನಿಂದ ಮಾಡಿದ ಸಾಧನ.

ಕಚಗುಳಿ – ಕಂಕುಳಲ್ಲಿ ಅಥವಾ ಸೊಂಟದಲ್ಲಿ ಬೆರಳಾಡಿಸಿದಾಗ ಆಗುವ ಅನುಭವ.

ಕಟಕ – ಸೈನ್ಯ,ಪಡೆ.

ಕಡಗ – ಕೈಗೆ ಅಥವಾ ಕಾಲಿಗೆ ಹಾಕುವ ಬಳೆ.

ಕಣ – ಧಾನ್ಯಗಳನ್ನು ಒಕ್ಕುವ ಅಥವಾ ಸಿದ್ಧಪಡಿಸುವ ಸ್ಥಳ,ಯುದ್ಧ ಭೂಮಿ

ಕಣ್ಣು – ನಯನ.

ಕದ – ಬಾಗಿಲನ್ನು ಮುಚ್ಚುವ ಹಲಗೆ, ಬಾಗಿಲು ಪಡಿ, ಕದವು.

ಕದನ – ಯುದ್ಧ, ಕಾಳಗ.

ಕಫ – ಕೆಮ್ಮಿದಾಗ ಬರುವ ಶ್ಲೇಷ್ಮ.

ಕರ – ಕೈ, ಆನೆಯ ಸೊಂಡಿಲು.

ಕರಗ – ತಲೆಯ ಮೇಲೆ ಕಲಶವನ್ನಿಟ್ಟು ನರ್ತಿಸುವುದು, ಒಂದು ಉತ್ಸವದ ಹೆಸರು.

ಕರಟ – ತೆಂಗಿನ ಚಿಪ್ಪು.

ಕಲರವ – ಮಧುರವಾದ ಧ್ವನಿ.

ಕಳಸ – ಬಿಂದಿಗೆ. ಕೊಡ, ಕಳಶ.

ಕಾಗೆ – ಪಕ್ಷಿ, ವಾಯಸ.

ಕಾಲ – ಸಮಯ, ವೇಳೆ.

ಕಾಳು – ಬೀಜ, ಧಾನ್ಯ.

ಕೀರುತಿ – ಕೀರ್ತಿ, ಯಶಸ್ಸು.

ಕುಣಿ – ನೆಗೆದಾಡು, ಜಿಗಿದಾಡು, ನರ್ತಿಸು.

ಕೂಸು – ಮಗು, ಹಸುಳೆ.

ಕೃತಿ – ಕೆಲಸ, ಕಾರ್ಯ, ಗ್ರಂಥ.

ಕೃಷಿ – ಬೇಸಾಯ,ಆರಂಭ.

ಕೇರೆ – ಒಂದು ಜಾತಿಯ ಹಾವು.

ಕೇಸರಿ – ಸಿಂಹ, ಕುದುರೆ, ಬಕುಳದ ಹೂ.

ಕೈದಿ – ಬಂದಿ, ಸೆರೆಯಾಳು.

ಕೊಂಬೆ – ರೆಂಬೆ, ಟೊಂಗೆ.

ಕೊಡೆ – ಛತ್ರಿ.

ಕೋರೆ – ಡೊಂಕು, ಪ್ರಾಣಿಗಳ ದವಡೆಯ ಮೊನಚಾದ ಹಲ್ಲು.

ಕ್ರಮ – ರೀತಿ, ಕಾರ್ಯವಿಧಾನ.

ಕ್ಷಮಿಸು – ತಪ್ಪನ್ನು ಮನ್ನಿಸು.

ಖ

ಖಗ – ಆಕಾಶದಲ್ಲಿ ಸಂಚರಿಸುವ ಪಕ್ಷಿ.

ಖಡ್ಗ – ಕತ್ತಿ, ಕರವಾಳ.

ಖರ – ಹೇಸರಗತ್ತೆ.

ಖುಷಿ – ಹಿಗ್ಗು,ಸಂತೋಷ.

ಗ

ಗಗನ – ಆಕಾಶ

ಗಜ – ಆನೆ

ಗರ – ಗ್ರಹ, ಪಗಡೆಯಾಟದಲ್ಲಿ ದಾಳದಲ್ಲಿರುವ ಸಂಖ್ಯೆ

ಗಾಬರಿ – ಹೆದರಿಕೆ, ಭಯ

ಗಾಯನ – ಹಾಡುವುದು

ಗಿಡ – ಮರದ ಎಳೆಯ ರೂಪ

ಗಿರಿ – ಬೆಟ್ಟ

ಗೀಗೀ – ಒಂದು ಬಗೆಯ ಜನಪದ ಗೀತೆ

ಗುಂಪು – ಸಮೂಹ

ಗುಗ್ಗರಿ – ಕಡಲೆ, ಹೆಸರು ಮುಂತಾದ ಕಾಳುಗಳನ್ನು ಬೇಯಿಸಿ ತಯಾರಿಸುವ ತಿನಿಸು

ಗುಡಿ – ಧ್ವಜ, ಬಾವುಟ,ದೇವಾಲಯ

ಗುಣಗಾನ– ಒಳ್ಳೆಯ ಸ್ವಭಾವವನ್ನು ಹೊಗಳುವುದು

ಗುಬ್ಬಚ್ಚಿ – ಗುಬ್ಬಿ

ಗೂಡು – ಪಕ್ಷಿಗಳ ವಾಸಸ್ಥಾನ

ಗೇರು – ಗೋಡಂಬಿ

ಗೈರು – ಇಲ್ಲದಿರುವುದು, ಅಭಾವ

ಘ

ಘಟ – ಮಣ್ಣಿನ ದೊಡ್ಡ ಪಾತ್ರೆ

ಘಟಕ – ಸಂಸ್ಥೆಗಳ, ದೇಶದ ಒಂದು ಭಾಗ

ಘನ – ಗಟ್ಟಿಯಾದುದು

ಘೃತ – ತುಪ್ಪ

ಚ

ಚದರ – ಚಚ್ಚೌಕ, ಚೌರಸ

ಚರ – ಚಲಿಸುವ, ನಡೆಯುವ

ಚಾಚಾ – ತಂದೆಯ ಸೋದರ, ಚಿಕ್ಕಪ್ಪ

ಚಿಕ್ಕಪ್ಪ – ತಂದೆಯ ಸೋದರ, ತಾಯಿಯ ಸೋದರಿಯ ಗಂಡ

ಚಿಕ್ಕಮ್ಮ – ತಾಯಿಯ ಸೋದರಿ, ತಂದೆಯ ಸೋದರನ ಹೆಂಡತಿ

ಚಿಮಣಿ – ಹೊಗೆ ಹೋಗುವ ನಳಿಕೆ, ಗಾಜಿನ ಬುರುಡೆ

ಚೀಲ – ಪದಾರ್ಥಗಳನ್ನು ತುಂಬಲು ಬಟ್ಟೆಯಿಂದ ಮಾಡಿದ ಸಂಚಿ

ಚೈನು – ಸರಪಳಿ, ಕೊರಳಲ್ಲಿ ಧರಿಸುವ ಆಭರಣ

ಚೊಗ – ಉದ್ದನೆಯ ನಿಲುವಂಗಿ

ಚೋರ – ಕಳ್ಳ

ಚೌಲ – ಚೂಡಾಕರ್ಮ, ಜುಟ್ಟು ಕತ್ತರಿಸುವ ಕಾರ್ಯಕ್ರಮ

ಛ

ಛಲ – ಹಟ

ಜ

ಜಠರ – ಹೊಟ್ಟೆ, ಉದರ

ಜನ – ಮನುಷ್ಯ ಸಮುದಾಯ

ಜನುಮ – ಹುಟ್ಟು, ಜನ್ಮ

ಜಯಂತಿ – ಬಾವುಟ, ಧ್ವಜ, ಜನ್ಮದಿನ

ಜವ – ವೇಗ, ಯಮ

ಜಾಣ – ಬುದ್ಧಿವಂತ, ಚದುರ

ಜೀಕು – ತೂಗು, ಉಯ್ಯಲಾಡು

ಜೀಜೀ – ಅಕ್ಕ

ಜೂಜು – ಹಣ ಕಟ್ಟಿ ಆಡುವ ಆಟ

ಜೋಕಾಲಿ–ಉಯ್ಯಾಲೆ,ತೂಗುಮಣೆ

ಜೌಗು – ತೇವೆ, ಜವುಗು

ಝ

ಝಳ – ಪ್ರಕಾಶ, ಕಾಂತಿ, ಬಿಸಿ

ಟ

ಟೈರು – ವಾಹನಗಳು ಚಲಿಸಲು ಬಳಸುವ ರಬ್ಬರಿನಿಂದ ಮಾಡಿದ ಚಕ್ರ

ಠ

ಠೀವಿ – ಬೆಡಗು, ಗತ್ತು

ಡ

ಡಾಬಾ – ಹೋಟೆಲು

ಡುರುಕಿ – ಗುಟುಕುಹಾಕು

ಡೇರೆ – ಬಟ್ಟೆಯಿಂದ ಮಾಡಿದ ಮನೆ, ಗುಡಾರ

ಡೈರಿ – ದಿನಚರಿಯ ಪುಸ್ತಕ, ಹಾಲು ಸಂಗ್ರಹಿಸುವ ಸ್ಥಳ

ಡೌಲು – ಒಣ ಹೆಮ್ಮೆ

ತ

ತನಯ – ಮಗ

ತಬಲ – ಒಂದು ಬಗೆಯ ಚರ್ಮ ವಾದ್ಯ

ತವಕ – ಆತುರ, ಅವಸರ

ತಾತಾ – ತಂದೆಯ ತಂದೆ, ಅಜ್ಜ, ತಾಯಿಯ ತಂದೆ

ತಾರೆ – ನಕ್ಷತ್ರ

ತಿಂಡಿ – ತಿನಿಸು, ಆಹಾರ

ತುಂಟ – ಚೇಷ್ಟೆ ಮಾಡುವವನು, ತಂಟೆಕೋರ

ತುರುಸು – ರಭಸ, ವೇಗ

ತೂತು – ರಂಧ್ರ, ವಟ್ಟೆ, ಕಂಡಿ

ತೃಣ – ಹುಲ್ಲು, ಸ್ವಲ್ಪ

ತೊರೆ – ಬಿಡು, ಪ್ರವಹಿಸು, ಹರಿ

ತೊಳೆ – ಸ್ವಚ್ಛಮಾಡು, ಶುದ್ಧಗೊಳಿಸು

ತೋಟ – ಉದ್ಯಾನ, ಕೈತೋಟ

ತೋರ – ದಪ್ಪ, ಗಾತ್ರ

ತೌರು – ಹುಟ್ಟಿದಮನೆ, ತಂದೆತಾಯಿಗಳ ಮನೆ

ತೌಳವ – ತುಳುನಾಡಿಗೆ ಸೇರಿದವ

ಥ

ಥೇಟ್ – ತದ್ರೂಪವಾದ, ವ್ಯತ್ಯಾಸವಿಲ್ಲದ

ದ

ದಂಟು – ಕಾಂಡ, ನಾಳ

ದನ – ಹಸು, ಎಮ್ಮೆ ಮೊದಲಾದ ಪ್ರಾಣಿ

ದರ – ಬೆಲೆ, ಧಾರಣೆ

ದವಸ – ಧಾನ್ಯ, ಕಾಳುಕಡ್ಡಿ

ದಸರ – ನವರಾತ್ರಿ ಉತ್ಸವ, ಆಶ್ವಯುಜ ಶುಕ್ಲ ಪಾಡ್ಯದಿಂದ ಹತ್ತು ದಿನಗಳು ನಡೆಸುವ ಹಬ್ಬ

ದಾರಿ – ಹಾದಿ, ಮಾರ್ಗ

ದಿನಾಲೂ – ಪ್ರತಿ ದಿನ

ದೂರು – ಮೊರೆಹೋಗು, ಅಹವಾಲು ಮಾಡು

ದೆಸೆ – ಎಡೆ, ಸ್ಥಳ

ದೊಣೆ – ಬೆಟ್ಟದ ಮೇಲಿರುವ ಸ್ವಾಭಾವಿಕವಾದ ಹೊಂಡ, ಹಳ್ಳ

ದೋಣಿ – ನಾವೆ, ತೆಪ್ಪ

ದೋರೆ – ಅರೆ ಮಾಗಿದ ಫಲ

ದ್ರವ – ಹರಿಯುವಂತಹ ವಸ್ತು, ನೀರು, ರಸ ಮೊದಲಾದವು

ದ್ರುಮ – ಮರ, ವೃಕ್ಷ

ಧ

ಧನ – ಹಣ, ಸಂಪತ್ತು

ಧರೆ – ಭೂಮಿ

ಧವಳ – ಬಿಳುಪು

ಧೃತಿ – ಧೈರ್ಯ, ಕೆಚ್ಚು

ಧ್ವಜ – ಬಾವುಟ

ನ

ನಖ – ಉಗುರು

ನಗ – ಆಭರಣ, ಒಡವೆ

ನಗರ – ಮುಖ್ಯಪಟ್ಟಣ, ಪುರ

ನಟ – ನಟಿಸುವವನು

ನಟನ – ನರ್ತನ, ನಾಟ್ಯ

ನಯ – ನ್ಯಾಯ, ನೀತಿ, ನುಣುಪು

ನಯನ – ಕಣ್ಣು

ನರ – ಮನುಷ್ಯ

ನವ – ಹೊಸ, ಒಂಬತ್ತು

ನಳ – ನಲ್ಲಿ, ಕೊಳವೆ, ಒಬ್ಬರಾಜನ ಹೆಸರು

ನಾಡು – ಜನವಸತಿಯುಳ್ಳ ಪ್ರದೇಶ, ದೇಶ

ನಿಶ್ಚಯ – ದಿಟ, ಸತ್ಯ

ನಿಶ್ಚಲ – ಚಲನೆ ಇಲ್ಲದುದು

ನಿಶ್ಚಿತ – ನಿರ್ಧರಿಸಿದುದು

ನೃಪ – ರಾಜ

ನೇತಾರ – ಮುಖಂಡ, ಮುಂದಾಳು

ಪ

ಪಚನ – ಬೇಯಿಸುವುದು, ಅರಗುವುದು

ಪಟ – ಬಟ್ಟೆ, ಚಿತ್ರ

ಪಠಣ – ಓದುವಿಕೆ, ವಾಚನ

ಪದರ – ಮಡಿಕೆ, ಪೊರೆ, ಹಾಳೆ

ಪರಂಗಿ – ಪಪ್ಪಾಯ

ಪಿರಿಪಿರಿ – ತೊಂದರೆ

ಪೀಪೀ – ಸೀಟಿಯಂತೆ ಊದುವ ಒಂದು ಸಾಧನ

ಪೂರಿ – ಎಣ್ಣೆ ಅಥವಾ ತುಪ್ಪದಲ್ಲಿ ಕರಿದು ಮಾಡಿದ ತಿನಿಸು

ಪೆರೆ – ಚಂದ್ರ

ಪೊರೆ – ಕಾಪಾಡು

ಪೊಸತು – ಹೊಸತು

ಪೋರ – ಹುಡುಗ, ಬಾಲಕ

ಪೌರ – ನಗರದಲ್ಲಿ ವಾಸಿಸುವವ, ಪ್ರಜೆ

ಪೌಳಿ – ಪ್ರಾಕಾರ, ಅಡ್ಡಗೋಡೆ

ಫ

ಫಣಿ – ಹಾವಿನ ಹೆಡೆ

ಫಲ – ಹಣ್ಣು, ಬೆಳೆ, ಲಾಭ

ಫಲಕ – ತೆಳುವಾದ ಹಾಳೆ, ಹಲಗೆ

ಬ

ಬಂಧು – ನೆಂಟ, ಸಂಬಂಧಿಕ

ಬಡಗಣ – ಉತ್ತರ ದಿಕ್ಕಿನ

ಬನ – ಕಾಡು

ಬರ – ಕ್ಷಾಮ, ದುರ್ಭಿಕ್ಷ

ಬಸವ – ಗೂಳಿ

ಬಾನು – ಆಕಾಶ, ಗಗನ

ಬಾಲ – ಮಗು, ಶಿಶು, ಲಾಂಗೂಲ

ಬಿತ್ತು – ಬೀಜ ಹಾಕು

ಬೆಣೆ – ಮರದ ಗೂಟ

ಬೆತ್ತ – ಬಿದಿರಿನ ಒಂದು ಬಗೆ, ಸಣ್ಣ ಬಿದಿರು

ಬೈಗು – ಸಾಯಂಕಾಲ, ಸಂಜೆ

ಬೊಟ್ಟು – ಬೆರಳು, ಅಂಗುಲಿ, ಚಿಕ್ಕ ತಿಲಕ

ಬ್ಯಾಡ – ಬೇಡ

ಭ

ಭಜನ – ಪೂಜೆ, ಆರಾಧನೆ

ಭಟ – ಯುದ್ಧದಲ್ಲಿ ಕಾದಾಡುವವ

ಭವ – ಹುಟ್ಟು, ಶಿವ

ಭವನ – ಮನೆ, ಸೌಧ

ಭಾಷಣ – ಮಾತನಾಡುವುದು, ಉಪನ್ಯಾಸ

ಭುವನ – ಭೂಮಿ, ಜಗತ್ತು

ಭೃಂಗ – ದುಂಬಿ

ಮ

ಮಗ್ಗ – ಬಟ್ಟೆಗಳನ್ನು ನೇಯುವ ಸಾಧನ

ಮಜ – ಮೋಜು, ಗಮ್ಮತ್ತು

ಮಜ್ಜನ – ಸ್ನಾನ, ಜಳಕ

ಮಡ – ಕುಟೀರ, ಆಶ್ರಮ, ಪಾಠಶಾಲೆ

ಮಣ – ತೂಕದ ಒಂದು ಪ್ರಮಾಣ, ಸುಮಾರು ೪೦ಸೇರು

ಮಥನ – ಕಡೆಯುವುದು

ಮಮತೆ – ಪ್ರೀತಿ, ವಾತ್ಸಲ್ಯ

ಮರಳು – ಉಸುಕು, ಹೊಯಿಗೆ

ಮಸ್ತಕ – ತಲೆ

ಮಾಲೆ – ಹಾರ

ಮುದಿರು – ಸುಕ್ಕಾಗು, ಸುಕ್ಕುಗಟ್ಟು

ಮುನಿ – ಸಿಟ್ಟಾಗು, ಕೋಪಗೊಳ್ಳು, ತಪಸ್ವಿ

ಮುಷ್ಕರ – ಸತ್ಯಾಗ್ರಹ, ಚಳುವಳಿ

ಮೃಡ – ಈಶ್ವರ, ಶಿವ

ಮೆರೆ – ಎದ್ದುತೋರು

ಮೊರೆ – ಆರ್ತನಾದ ಮಾಡು

ಮೋಜು – ವಿನೋದ, ತಮಾಷೆ

ಯ

ಯೂಪ – ಯಜ್ಞದ ಕಂಬ

ಯೋಜನ – ದೂರದ ಅಳತೆಯ ಒಂದು ಪ್ರಮಾಣ

ರ

ರಜ – ಧೂಳು

ರವಿ – ಸೂರ್ಯ

ರಸ – ದ್ರವ, ಸಾರ

ರುಜು – ಸಹಿ,ದಸ್ಕತ್ತು, ನ್ಯಾಯವಾದುದು

ರೆಂಬೆ – ಮರದ ಕೊಂಬೆ, ಶಾಖೆ

ರೋಟಿ – ರೊಟ್ಟಿ

ರೋಗಾಣು–ಕಾಯಿಲೆಗೆ ಕಾರಣವಾಗುವ ಸೂಕ್ಷ್ಮಜೀವಿ

ಲ

ಲವ – ಅಲ್ಪ, ಸ್ವಲ್ಪ, ಶ್ರೀರಾಮನ ಮಕ್ಕಳಲ್ಲಿ ಒಬ್ಬ

ಲಡ್ಡು – ಒಂದು ಬಗೆಯ ಸಿಹಿತಿಂಡಿ, ಲಾಡು

ಲೂಟಿ – ಸುಲಿಗೆ, ದರೋಡೆ

ವ

ವಚನ – ಮಾತು, ಕಾವ್ಯಪ್ರಕಾರ

ವನ – ಕಾಡು, ಅರಣ್ಯ

ವನಜ – ನೀರಿನಲ್ಲಿ ಹುಟ್ಟಿದುದು, ತಾವರೆ

ವರ – ಅನುಗ್ರಹ, ಕೊಡುಗೆ

ವಾಗ್ಮಿ – ಚೆನ್ನಾಗಿ ಮಾತನಾಡುವವನು

ವಿಖ್ಯಾತ – ಪ್ರಸಿದ್ಧಿ, ಖ್ಯಾತಿ

ವೃಥಾ – ವ್ಯರ್ಥವಾಗಿ, ಸುಮ್ಮನೆ

ವೈರಿ – ಶತ್ರು

ಶ

ಶಕ – ನಿರ್ದಿಷ್ಟ ಕಾಲದಿಂದ ಆರಂಭಿಸುವ ಕಾಲಗಣನೆ

ಶಕಟ – ರಥ, ಬಂಡಿ, ಗಾಡಿ

ಶಪಥ – ಆಣೆ, ಭಾಷೆ

ಶಬರ – ಕಿರಾತ, ಬೇಡ

ಶಯನ – ಮಲಗಿರುವಿಕೆ

ಶರ – ಬಾಣ

ಶಾಕ – ಅಡುಗೆಗಾಗಿ ಬಳಸುವ ಕಾಯಿ ಸೊಪ್ಪು ಮುಂತಾದವು, ತರಕಾರಿ

ಶಾಖೆ – ಕೊಂಬೆ, ಗೆಲ್ಲು, ಕಾವು

ಶುಚಿ – ಶುದ್ಧವಾದ, ನಿರ್ಮಲವಾದ

ಶೃಂಗ – ಪ್ರಾಣಿಯ ಕೊಂಬು, ಕೋಡು

ಶೋಕಿ – ವಿನ್ಯಾಸ

ಶೌರಿ – ಕೃಷ್ಣ

ಶ್ರವಣ – ಕೇಳುವಿಕೆ, ಆಲಿಸುವಿಕೆ

ಸ

ಸಂಗ್ರಹಿಸು–ಒಟ್ಟುಗೂಡಿಸು, ಶೇಖರಿಸು

ಸಗರ – ಒಬ್ಬ ರಾಜ

ಸಖ – ಸ್ನೇಹಿತ, ಗೆಳೆಯ

ಸಡಗರ – ಉತ್ಸಾಹ, ಸಂಭ್ರಮ

ಸಣ್ಣಾಟ – ಬಯಲಾಟದ ಒಂದು ಪ್ರಕಾರ

ಸತ್ಕವಿ – ಒಳ್ಳೆಯ ಕವಿ

ಸದರ – ಸಲಿಗೆ, ಸಸಾರ

ಸನ್ಮಾನ – ವಿಶೇಷವಾದ ಗೌರವ, ಮಾನ್ಯತೆ

ಸಫಲ – ಫಲವನ್ನು ಹೊಂದಿರುವುದು, ಸಾರ್ಥಕತೆ

ಸರ – ಸ್ವರ, ದನಿ, ಮಾಲೆ

ಸರಸ – ವಿನೋದ, ಸೊಬಗು

ಸಿದ್ಧ – ಸಾಧಿಸಿದವನು, ಅಲೌಕಿಕ ಸಾಮರ್ಥ್ಯವುಳ್ಳವನು

ಸೀಬೆ – ಒಂದು ಬಗೆಯ ಹಣ್ಣು, ಪೇರಲ

ಸೀಸ – ತಲೆ, ಒಂದು ಬಗೆಯ ಲೋಹ

ಸೃಜನ – ಉತ್ಪತ್ತಿ, ಹುಟ್ಟು

ಸೆಖೆ – ಶಾಖ, ಕಾವು

ಸೆಳೆ – ಜಗ್ಗು, ಎಳೆ

ಸೇರು – ಮುಟ್ಟು, ಕೂಡು, ಒಂದು ಅಳತೆ–ನಾಲ್ಕು ಪಾವು

ಸೌಟು – ಅಡುಗೆ ಬಡಿಸಲು ಉಪಯೋಗಿಸುವ ಒಂದು ಸಾಧನ, ಸಟ್ಟುಗ

ಹ

ಹಚ್ಚಡ – ದುಪ್ಪಟಿ, ಚಾದರ

ಹಚ್ಚೆ – ಮನುಷ್ಯನ ಅಂಗದ ಮೇಲೆ ಚಿತ್ರ ಬರೆದು ಚುಚ್ಚಿ ಬಣ್ಣ ತುಂಬುವುದು

ಹಠ – ಛಲ, ಆಗ್ರಹ, ಹಟ

ಹಣ – ಧನ, ದ್ರವ್ಯ, ಒಂದು ನಾಣ್ಯ

ಹದ – ಸರಿಯಾದ ಸ್ಥಿತಿ, ಸರಿಯಾದ ಸಮಯ

ಹಯ – ಕುದುರೆ

ಹರ – ಶಿವ, ಈಶ್ವರ

ಹವಳ – ಕೆಂಪುಬಣ್ಣದ ಮಣಿ, ನವರತ್ನಗಳಲ್ಲಿ ಒಂದು

ಹವೆ – ವಾಯುಗುಣ, ಗಾಳಿ

ಹಳಿ – ನಿಂದಿಸು, ರೈಲು ಕಂಬಿ

ಹೂಜಿ – ಮಣ್ಣು ಅಥವಾ ಲೋಹದಿಂದ ಮಾಡಿದ ನೀರು ತುಂಬಿಸುವ ಪಾತ್ರೆ, ಕೂಜ

ಹೆಡೆ – ಹಾವಿನ ಬಿಚ್ಚಿದ ತಲೆ

ಹೆಮ್ಮರ – ದೊಡ್ಡ ಮರ